ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 10 | ಮಾರ್ಚ್ 8, 1987 | ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಹೆಗಡೆ ಸರಕಾರದ ಹೊಸ ವರ್ಷದ ದೇಣಿಗೆ

ಅತ್ಯಾವಶ್ಯಕ ವಸ್ತುಗಳ ಮೇಲೆ ಹೊಸ ಕರಭಾರ ಜೀವನ ದುರ್ಭರ

ಎನ್.ಕೆ. ಉಪಾಧ್ಯಾಯ

ಬಂಡವಾಳಶಾಹೀ ಪಥದಲ್ಲಿಯೇ ತನ್ನ ಆಡಳಿತೆಯನ್ನು ನಡೆಸಿಕೊಂಡು ಹೋಗುತ್ತಿರುವ ಕರ್ನಾಟಕದ ಜನತಾ ಪಕ್ಷದ ಹೆಗಡೆ ಸರಕಾರ ಕೆಳಗಿನ ಮತ್ತು ಮಧ್ಯಮ ವರ್ಗದವರು ದಿನನಿತ್ಯ ಬಳಸುತ್ತಿರುವ ಅತ್ಯಾವಶ್ಯಕ ವಸ್ತುಗಳ ಮೇಲೆ ತೆರಿಗೆ ಹೆಚ್ಚಿಸಿ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯ ಗುರಿ ಇಟ್ಟುಕೊಂಡಿರುವ 1977-78ರ ಹೊಸ ವರ್ಷದ ಅಂದಾಜು ಪತ್ರಿಕೆಯನ್ನು ಅರ್ಥಿಕ ಮಂತ್ರಿಯೂ ಆಗಿರುವ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಫೆ.27ರಂದು ವಿಧಾನ ಸಭೆಯಲ್ಲಿ ಮಂಡಿಸಿದ್ದಾರೆ.

ಬತ್ತ, ಕಾಫಿ, ಚಹಾ, ಡಿಸೆಲ್, ಪೆಟ್ರೋಲ್, ರಸಗೊಬ್ಬರ, ದ್ವಿದಳ ಧಾನ್ಯ, ಅಡಿಗೆ ಅನಿಲ, ಪೈಂಟ್, ಮೈಸಾಬೂನು, ಬೈಸಿಕಲ್,ಐಸ್‌ಕ್ರೀಮ್, ಟಾಯರ್, ಟ್ಯೂಬ್, ಸಿಮೆಂಟ್, ಆಸ್‌ಬೆಸ್ಟೋ ಶೀಟ್ ಮೊದಲಾದ ಅವಶ್ಯಕ ವಸ್ತುಗಳ ಮೇಲೆ ತೆರಿಗೆ ಹೆಚ್ಚಿಸಿಯೂ ರೂ.147.97 ಕೋಟಿ ಕೊರತೆಯನ್ನು ತೋರಿಸಿದ್ದಾರೆ. ಈ ವರ್ಷದ ಕರಭಾರ 145 ಕೋಟಿ ರೂಪಾಯಿಗಳು.

ಕಳೆದ ವರ್ಷ ಹೆಗಡೆಯವರು 41 ಕೋಟಿ ರೂಪಾಯಿಯ ಹೊಸ ತೆರಿಗೆ ಹೇರಿ ಕೊರತೆ ರೂ.39ಕೋಟಿ ತೋರಿಸಿದ್ದರು. ಆದರೆ ಈ ವರ್ಷ ರೂ.145 ಕೋಟಿ ಕರಭಾರ ಸೂಚಿಸಿಯೂ ರೂ 149.95 ಕೋಟಿ ಕೊರತೆ ತೋರಿಸಿದ್ದಾರೆ. ಕಾವೇರಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿದೇಶಿ ಹಣ ಲಭ್ಯವಾಗಬಹುದೆಂದು ನಿರೀಕ್ಷಿಸಿರುವುದರಿಂದ ಕೊರತೆಯ ಗಾತ್ರ ಕಡಿಮೆಯಾಗಿದೆಯಲ್ಲದೆ, ಸರಕಾರದ ಮಿತವ್ಯಯ ಕ್ರಮದಿಂದಲ್ಲ; ಅಥವಾ ಕೇಂದ್ರ ಕೊಡಮಾಡಬಹುದಾದ ಅನುದಾನದ ಹೆಚ್ಚಳದಿಂದಲೂ ಅಲ್ಲ.

ಖೋತಾ ಬಜೆಟ್ ಯಾವಾಗಲೂ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಕೇಂದ್ರ ಸರಕಾರದ ಆರ್ಥಿಕ ನೀತಿಯಿಂದಾಗಿ ಸರಕಾರಿ ವಕ್ತಾರರ ಹೇಳಿಕೆಯಂತೆಯೇ ಬೆಂಗಳೂರು ನಗರದಲ್ಲಿ ಶೇ.9ರಷ್ಟು ಹಣದುಬ್ಬರ ಹೆಚ್ಚಾಗಿದೆ. ಹಾಗೆಯೇ ಕೇಂದ್ರದ ಅಂಕೆ ಸಂಖ್ಯೆ ಪ್ರಕಾರವೇ ಇಡೀ ದೇಶದ ದೊಡ್ಡ ನಗರಗಳ ಪೈಕಿ ಬೆಂಗಳೂರು ನಗರದ ಜನರು ಅತಿ ಹೆಚ್ಚು ಬೆಲೆಯ ಹೊರೆ ಹೊರುತ್ತಿದ್ದಾರೆ. ಹೋದ ವರ್ಷ ಬಜೆಟ್ ಮಂಡಿಸುವಾಗ ಒಂದು ರೂಪಾಯಿಯ ಮೌಲ್ಯ 16ಪೈಸೆ ಇತ್ತು. ಈಗ ಅದು 14ಪೈಸೆ ಮಾತ್ರ.

ಕರ್ನಾಟಕ ಹಣದುಬ್ಬರದ ಭಾದೆಗೆ ಒಳಗಾಗಿಲ್ಲೆಂದು ಬಜೆಟ್‌ಮಂಡಿಸಿದಾಗ ರಾಮಕೃಷ್ಣ ಹೆಗಡೆಯವರು ಹೇಳಿದರು. ತನ್ನ ಕೊರತೆ ಬಜೆಟ್‌ದಿಂದಾಗಿ ಬೆಲೆಯಲ್ಲಾಗಲೀ ಹಣದುಬ್ಬರದಲ್ಲಾಗಲೀ ಏರುಪೇರಾಗುವುದಿಲ್ಲೆಂದು ಹೇಳಿದ್ದಾರೆ. ಹೋದ ವರ್ಷ ಕೊರತೆಯ ಕೇಂದ್ರ ಬಜೆಟ್ ಮಂಡಿಸಿದಾಗ ಆಗಿನ ಆರ್ಥಿಕ ಮಂತ್ರಿ ವಿ.ಪಿ. ಸಿಂಗ್ ಅವರೂ ಹೆಗಡೆಯವರ ಮಾತನ್ನೇ ಹೇಳಿದ್ದರು. ಆದರೆ ಬಜೆಟ್‌ನ ಪರಿಣಾಮವಾಗಿ ಪ್ರತಿಯೊಂದು ವಸ್ತುವಿನ ಬೆಲೆ ಹೆಚ್ಚಾಗಿತ್ತೆಂಬುದು ಎಲ್ಲರಿಗೂ ಗೊತ್ತು. ಈಗ ರಾಜ್ಯದ ಹಾಗೂ ಕೇಂದ್ರದ ಕೊರತೆ ಬಜೆಟ್ ಮತ್ತು ಅಪ್ರತ್ಯಕ್ಷ ಕರಗಳ ಹೆಚ್ಚಳದಿಂದಾಗಿ ಪ್ರತಿಯೊಂದು ವಸ್ತುವಿನ ಬೆಲೆ ಹತೋಟಿ ಮೀರಿ ಏರುವುದು ಕಂಡುಬರುತ್ತಿದೆ. ಕರಾಕರಣೆ ಸೂಚನೆಗಳನ್ನೊಳಗೊಂಡ ಬಜೆಟ್‌ವಿಧಾನ ಸಭೆ ಮತ್ತು ಲೋಕ ಸಭೆಯಲ್ಲಿ ಮಂಜೂರಾಗುವ ಮುಂಚೆಯೇ ಉತ್ಪಾದಕರೂ, ಸೋಕ ವ್ಯಾಪಾರಸ್ಥರೂ ಪ್ರತಿಯೊಂದು ವಸ್ತುವಿನ ಬೆಲೆಯನ್ನು ತಾವೇ ನಿರ್ಧರಿಸಿ,ವಸ್ತುಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡುತ್ತಾರೆ. ಒಂದು ಪೈಸೆಯಷ್ಟು ತೆರಿಗೆ ಹೇರಿದರೆ 50 ಪೈಸೆಯಿಂದ ಒಂದು ರೂ. ಅಷ್ಟು ಬೆಲೆ ಹೆಚ್ಚಿಸುತ್ತಾರೆ ಅವರು. ಅವರ ಮೇಲೆ ಹತೋಟಿ ಯಾರದ್ದೂ ಇಲ್ಲ. ಬೆಲೆ ಹೆಚ್ಚಳದ ವಿರುದ್ಧ ಪ್ರತಿಭಟಿಸುವ ಶಕ್ತಿ ಗ್ರಾಹಕರಲ್ಲಿಲ್ಲವಾದದ್ದರಿಂದ ಸುಲಿಗೆ ಅವಿರತವಾಗಿ ಮುಂದೆ ಸಾಗಿದೆ.

ಸತತ ಬರಗಾಲದ ಪರಿಸ್ಥಿತಿಯಿಂದಾಗಿ ಭೂಕಂದಾಯವನ್ನು ಮಾಫಿ ಮಾಡಬೇಕಾಯಿತು. ಅದರಿಂದಾಗಿ ಸರಕಾರಿ ಬೊಕ್ಕಸಕ್ಕೆ ಹಾನಿಯಾಗಿದೆ ನಿಜ. ಆದರೆ ಹೆಗಡೆಯವರು ಬಜೆಟ್ಟನಲ್ಲೇ ತೋರಿಸಿರುವಂತೆ ವಿದ್ಯುತ್ ತೆರಿಗೆ ಮೇಲಿನ ನಷ್ಟ ರೂ. 215 ಕೋಟಿ. ತೆರಿಗೆ ಸಂಗ್ರಹದಲ್ಲಾದ ನಷ್ಟ ರೂ.233 ಕೋಟಿ ಹೀಗೆ ಆದಾಯದಲ್ಲೇ ರೂ 448ಕೋಟಿ ನಷ್ಟವಾಗಿದೆ. ಇದರ ಜೊತೆಯಲ್ಲೇ ಬರಗಾಲ ಪರಿಹಾರಕ್ಕಾಗಿ ರೂ 531 ಕೋಟಿ ಖರ್ಚು ಮಾಡಲಾಗಿದೆಯಂತೆ, ನೀರಾವರಿ ಯೋಜನೆ, ಅರಣ್ಯ ಬೆಳವಣಿಗೆ, ಒಣ ಬೇಸಾಯ ಅಭಿವೃದ್ಧಿಗಳ ಮೂಲಕ ಬರ ಪರಿಸ್ಥಿತಿಯನ್ನು ಕೆಲವು ಮಟ್ಟಿಗೆ ಹಿಡಿತದಲ್ಲಿಡಬಹುದು. ಆದರೆ ಭಾರವಾದ ಆಡಳಿತ ಖರ್ಚು, ಉತ್ಪಾದನವಲ್ಲದ ರಂಗಗಳಲ್ಲಿ ವಿನಾಕಾರಣ ವ್ಯಯ ಸರ್ಕಾರದ ಪ್ರತಿಯೊಂದು ಖಾತೆಯಲ್ಲಿಯೂ ಕೈಗಾರಿಕೆಯಲ್ಲಿಯೂ ಆದಾಯದ ಸೋರುವಿಕೆ ಮೊದಲಾದ ವಿಷಯಗಳ ಕುರಿತು ಗಮನ ಹರಿಸುವುದು ಅಗತ್ಯ.

ಕೇಂದ್ರ ಸರ್ಕಾರ ಪ್ರತಿವರ್ಷ ಕೊರತೆ ಬಜೆಟ್ ಮಂಡಿಸುತ್ತಿದೆ. ಕೆಲವು ಅವಶ್ಯಕ ವಸ್ತುಗಳ ಬೆಲೆಯನ್ನು ತಾನೇ ಹೆಚ್ಚಿಸುತ್ತಿದೆ ಕರಾಕರಣೆಯ

[8ನೇ ಪುಟ ನೋಡಿ]

ಹಚ್ಚಿನ ತೆರಿಗೆ ಭಾರ

ವಾಣಿಜ್ಯ ತೆರಿಗೆ	ರೂ. 105 ಕೋಟಿ
ಅಬಕಾರಿ ಸುಂಕ	ರೂ. 10-40 ಕೋಟಿ
ಮೋಟಾರು ವಾಹನ ತೆರಿಗೆ	ರೂ. 10-64 ಕೋಟಿ
ಸ್ಟ್ಯಾಂಪ್ ಡ್ಯೂಟಿ	ರೂ. 5-00 ಕೋಟಿ
ಖುಷ್ಕಿ ಜಮೀನು ಅಭಿವೃದ್ಧಿ ತೆರಿಗೆ	
ವಾಟರ್ ರೇಟ್ ಮೇಲಿನ ತೆರಿಗೆ	ರೂ. 10-45 ಕೋಟಿ
	145-49 ಕೋಟಿ

ದ. ಕ. ಜಿಲ್ಲೆಯಲ್ಲಿ ಕೊಲೆಗಳು

ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಪದ್ಮಲತಾ [17 ವರ್ಷ] ನಿಗೂಢ ರೀತಿಯಲ್ಲಿ ಕಣ್ಮರೆಯಾಗಿ ಸಾವಿಗೀಡಾಗಿದ್ದಾಳೆ. ಅಳಿಕೆ ಗ್ರಾಮದ ಸತ್ಯಸಾಯಿ ಸಂಸ್ಥೆಯ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ ಲೋಕಯ್ಯ ಪೂಜಾರಿ ಎಂಬುವನ ಸಂಶಯ ರೀತಿಯಲ್ಲಿ ಕೊಲೆ. ಮದುವೆಯಾಗುವ ಮಾತುಕೊಟ್ಟು ಸಬ್ ರಿಜಿಸ್ಟ್ರಾರ್ ಕಛೇರಿಗೆ ಕರೆದುಕೊಂಡು ಹೋಗಿ ಮದುವೆಯಾಗದೆ ತಾರಾ ಎಂಬ ಕನ್ಯೆಯ ಕೊಲೆ. ಕಡೆಕಾರಿನಲ್ಲಿ ಕೃಷ್ಣ ಸಾಲಿಯಾನ್ ಎಂಬಾತನ ಕೊಲೆ. ಕಳೆದ ಹದಿನೈದು ದಿನಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಳಿಬರುತ್ತಿರುವ ಕೊಲೆ ಪ್ರಕರಣಗಳು. ಇವುಗಳ ಪೈಕಿ ಕೃಷ್ಣಪ್ಪ ಸಾಲಿಯಾನ್ ಎಂಬಾತನ ಕೊಲೆ ಪ್ರಕರಣದಲ್ಲಿ ಕೊಲೆಗಾರರನ್ನು ಬಂಧಿಸಲಾಗಿದೆ. ಆದರೆ ಇತರ ಮೂರು ಪ್ರಕರಣದಲ್ಲಿ ಪೋಲೀಸ್ ಖಾತೆಯ ಅನಾಸ್ತೆ ಕಂಡುಬರುತ್ತಿದೆ.

ಅದಕ್ಕೆ ಕಾರಣವೂ ಇಲ್ಲದಿಲ್ಲ. ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಪದ್ಮಲತಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉತ್ತಮ ಕಾರ್ಯಕರ್ತರೊಬ್ಬರ ಮಗಳು. ಪದ್ಮಲತಾಳ ತಂದೆ ಉಜಿರೆ ಪ್ರದೇಶದಲ್ಲಿ ರೈತ ಸಂಘ ಕಟ್ಟಿ ಬೆಳೆಸುತ್ತಿದ್ದಾರೆ. ರೈತಸಂಘದ ಚಟುವಟಿಕೆ ಧರ್ಮಸ್ಥಳದ ಯಜಮಾನರುಗಳಿಗೆ ಮುಳುವಾಗಿದೆ. ದೇವರ ಹೆಸರಿನಲ್ಲಿ ಜನರನ್ನೂ, ರೈತರನ್ನೂ ಸುಲಿಯುತ್ತಿರುವವರು ಕರ್ನಾಟಕ ಪ್ರಾಂತ ರೈತ ಸಂಘದ ಚಟುವಟಿಕೆಗಳನ್ನು ಮುಟ್ಟುಹಾಕಲು ಬಹಳ ವರ್ಷಗಳಿಂದ ಗುಂಡಾಗಿರಿ ನಡೆಸುತ್ತಲೇ ಬಂದವರು. ದಬ್ಬಾಳಿಕೆ, ಗುಂಡಾಗಿರಿಯಿಂದಲೇ ರೈತಸಂಘದ ಚಟುವಟಿಕೆಗಳನ್ನು ತಡೆಯಲು ಸಾಧ್ಯವಿಲ್ಲೆಂದು ತಿಳಿದು ಈಗ ಪದ್ಮಲತಾಳಂತ ವಿದ್ಯಾರ್ಥಿನಿಯರ ಮೇಲೆ ಕೈ ಮಾಡಲು ಹೊರಟಂತಿದೆ. ಧರ್ಮ, ದೇವರ ಹೆಸರಿನಲ್ಲಿ ಕೊಲೆ ನಡೆದಾಗ ಅದರ ಚೌಕಾಶಿಗೆ ಪೋಲೀಸರ ಮಧ್ಯ ಪ್ರವೇಶ ಸಾಧ್ಯವೇ ? ಸಾಧ್ಯವಿಲ್ಲೆಂದು ದಕ್ಷಿಣ ಕನ್ನಡ ಜಿಲ್ಲೆಯ ಪೋಲೀಸ್ ಅಧಿಕಾರಿಗಳ ಅನಿಸಿಕೆ ಇರಬೇಕು. ಆ ಕಾರಣದಿಂದಲೇ ಪದ್ಮಲತಾಳ ಕೊಲೆಯ ಕುರಿತು ಇಂದಿಗೂ ಸಮರ್ಪಕ ಕ್ರಮ ಕೈಗೊಂಡಿಲ್ಲ ಪೋಲೀಸ್ ಖಾತೆ.

ಸತ್ಯ ಸಾಯಿ ಬಾಬಾನ ಕಾಲೇಜಿನ ವಿದ್ಯಾರ್ಥಿ ಲೋಕಯ್ಯ ಪೂಜಾರಿ ಇತ್ತೀಚೆಗೆ ಸತ್ಯಸಾಯಿಬಾಬಾ ಮುದ್ದೇನಹಳ್ಳಿಗೆ ಹೋದಾಗ ಅಳಿಕೆಯ ವಿದ್ಯಾರ್ಥಿಗಳೂ ಅಲ್ಲಿಗೆ ಹೋಗಿದ್ದರೆಂದೂ, ಆ ಸಮಯದಲ್ಲಿ ವಿದ್ಯಾರ್ಥಿಗಳು ವಿಟ್ಲದಿಂದ ಬ್ರಾಂಡಿ, ಮಾಂಸ ತಂದು ತಿಂದಿದ್ದರೆಂದೂ ವದಂತಿ. ಆ ಕಾರಣದಿಂದ ನಾಲ್ಕು ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಗೆ ಹಾಕಲಾಗಿತ್ತಂತೆ. ಈ ಸಂಬಂಧವಾಗಿ ಅಲ್ಲಿನ ಹಾಸ್ಟೆಲ್ ವಾರ್ಡನ್‌ರವಾನಂದ ಎಂಬುವರು ಲೋಕಯ್ಯನನ್ನು ಕರೆಸಿ ವಿಚಾರಿಸಿದರಂತೆ. ಅವನು ಸತ್ಯ ನುಡಿದಿರಬೇಕು. ಆ ಕಾರಣದಿಂದ ರೋಷಗೊಂಡ ತಪ್ಪಿತಸ್ಥ ವಿದ್ಯಾರ್ಥಿಗಳು ತನ್ನ ಮಗನನ್ನು ಕೊಂದಿರಬೇಕೆಂದು ಸತ್ತ ವಿದ್ಯಾರ್ಥಿಯ ತಂದೆ ಚೆನ್ನಪ್ಪ ಪೂಜಾರಿ ಇದೊಂದು ಕೊಲೆ ಪ್ರಕರಣವೆಂದು ಪೋಲೀಸ್ ಅಧಿಕಾರಿಗಳಿಗೆ ದೂರಿತ್ತಿದ್ದಾರೆ. ಆದರೆ ಪೋಲೀಸರು ಏನೂ ಮಾಡಿಲ್ಲ. ಸತ್ಯ ಸಾಯಿಬಾಬಾನ ಕೃಪೆ ಎಷ್ಟು ಪರಿಣಾಮಕಾರಿ ನೋಡಿದಿರಾ !

(8ನೇ ಪುಟ ನೋಡಿ)

ತ್ರಿಪುರ ಸರಕಾರದ ಮಹತ್ಸಾಧನೆ ಬಗ್ಗೆ - ನೃಪೇನ್ ಚಕ್ರವರ್ತಿ

('ಗಣಶಕ್ತಿ' ತಾ 18.1.87 ರ ಸಂಚಿಕೆಯಲ್ಲಿ ನಡೆಸಲಾದ ಸಂದರ್ಶನ)

ಗಣಶಕ್ತಿ

ನಿಮ್ಮ ಅಭಿಪ್ರಾಯದಲ್ಲಿ ತ್ರಿಪುರಾದ ಎಡರಂಗದ ಅತ್ಯಂತದೊಡ್ಡ ಸಾಧನೆ ಯಾವುದು ?

ನೃಪೇನ್ ಚಕ್ರವರ್ತಿ

ಬುಡಕಟ್ಟು ಜನರು ಮತ್ತು ಇತರರ ನಡುವಿನ ಜನಾಂಗೀಯ ಐಕ್ಯತೆಯೇ ನಮ್ಮ ಅತ್ಯಂತ ದೊಡ್ಡ ಸಾಧನೆ. ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ಎಪ್ಪತ್ತರಷ್ಟು ಜನ ಬುಡಕಟ್ಟು ಜನಾಂಗಕ್ಕೆ ಸೇರದೇ ಇರುವವರು. ಈ ಜನ ಬುಡಕಟ್ಟು ಜನರನ್ನು ಸಂರಕ್ಷಿಸಲು ಮುಂದೆ ಬರದೇ ಇದ್ದಿದ್ದಲ್ಲಿ ಬುಡಕಟ್ಟು ಜನರ ರಕ್ಷಣೆ ಅಸಾಧ್ಯವಾಗುತ್ತಿತ್ತು. ಸ್ವಾಯತ್ತ ಅಧಿಕಾರವುಳ್ಳ ಜಿಲ್ಲಾ ಕೌನ್ಸಿಲುಗಳೂ ಈ ನಿಟ್ಟನಲ್ಲಿ ಮಹತ್ವದ ಪಾತ್ರ ವಹಿಸಿವೆ. ನಮ್ಮ ರಾಜ್ಯದ ಮೂರನೇ ಎರಡರಷ್ಟು ಭಾಗವು ಸ್ವಾಯತ್ತ ಜಿಲ್ಲಾ ಕೌಸಿಲುಗಳ ವ್ಯಾಪ್ತಿಯಲ್ಲಿ ಬರುತ್ತವೆ. ಮತ್ತು ರಾಜ್ಯದ ಮೂರನೇ ಒಂದಂಶ ಜನ ಇಲ್ಲಿ ನೆಲೆಸಿದ್ದಾರೆ. ಇದರಲ್ಲಿ ಬುಡಕಟ್ಟು ಜನಾಂಗಕ್ಕೆ ಸೇರದಿರುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಬೇರೆ ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಏನಾದರೂ ಇದ್ದಿದ್ದರೆ ಬಹುಶಃ ಅಲ್ಲಿ ಜನಾಂಗೀಯ ಹಿಂಸೆ ನಡೆದು ಸಾಕಷ್ಟು ರಕ್ತಪಾತ ಸಂಭವಿಸುತಿತ್ತು. ತ್ರಿಪುರಾದಲ್ಲಿ ಐದು ಲಕ್ಷಜನ ಬುಡಕಟ್ಟು ಜನಾಂಗದವರಿದ್ದಾರೆ. ಅವರಿಗೆ ತಮ್ಮ ಬುಡಕಟ್ಟು ಭಾಷೆಯಲ್ಲೇ ಶಿಕ್ಷಣ ಪಡೆಯುವ ಹಕ್ಕೂ ಇದೆ. ಈ ಸ್ಥಿತಿ ಬೇರೆ ಯಾವ ರಾಜ್ಯದಲ್ಲಾದರೂ ಇದೆಯೇ ? ಡಾರ್ಜಿಲಿಂಗ್‌ಗೆ ಸಂಭಂದಿಸಿದಂತೆ ಪಶ್ಚಿಮ ಬಂಗಾಳದ ಎಡರಂಗವೂ ಇದೇ ಬೇಡಿಕೆಯನ್ನು ಮುಂದೊಡ್ಡಿದೆ. ರಾಜೀವ ಗಾಂಧಿ ಸರಕಾರ ಇದನ್ನು ಇನ್ನೂ ಒಪ್ಪಿಕೊಂಡಿಲ್ಲ. ಮಧ್ಯ ಪ್ರದೇಶ ರಾಜ್ಯವನ್ನೇ ತೆಗೆದುಕೊಳ್ಳಿ. ಅಲ್ಲಿನ ಒಂದು ಕೋಟಿ ಇಪ್ಪತ್ತು ಲಕ್ಷ ಬುಡಕಟ್ಟು ಜನರು ಜೀತದಾಳುಗಳಂತೆ ಬದುಕಿದ್ದಾರೆ. ಅವರಿಗೆ ತಮ್ಮ ಮೇಲಿನ ಹಕ್ಕೂ ನಿರಾಕರಿಸ್ಪಟ್ಟಿದೆ. ತ್ರಿಪುರಾದಲ್ಲಿ ನಾವು ಬುಡಕಟ್ಟು ಜನರ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಕಡೆಗೆ ಸಾಕಷ್ಟು ಗಮನ ಹರಿಸಿದ್ದೇವೆ.ಒಂದು ಸಾವಿರಕ್ಕೂ ಹೆಚ್ಚಿನ ಶಾಲೆಗಳಲ್ಲಿ ಬುಡಕಟ್ಟು ಜನರ ಭಾಷೆಯಾದ 'ಕೋಕ್ ಬರಾಕ್' ನಲ್ಲೇ ಶಿಕ್ಷಣ ನೀಡುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಕೇಂದ್ರ ಸರ್ಕಾರ ನಮಗೆ ಇನ್ನೂ ಹೆಚ್ಚಿನ ಹಣ ಕೊಟ್ಟರೆ ಸ್ವಾಯತ್ತ ಜಿಲ್ಲಾ ಕೌನ್ಸಿಲುಗಳನ್ನು ನಾವು ಇನ್ನೂ ಅಭಿವೃದ್ಧಿ ಪಡಿಸಲು ಸಾಧ್ಯ.

ಎರಡನೇಯದಾಗಿ

ನಾವು ಜನತೆಗೆ ಅವರ ಪ್ರಜಾಪ್ರಭುತ್ವ ಹಕ್ಕುಗಳನ್ನು ನೀಡಿದ್ದೇವೆ. ಅವಶ್ಯಕ ಸೇವಾ ಕಾಯ್ದೆ ESSMA ಯಂತಹ ದಮನಕಾರಿ ಕಾನೂನುಗಳನ್ನು ನಾವು ಇಲ್ಲಿ ಬಳಸುವುದಿಲ್ಲ. ಈ ದೃಷ್ಟಿಯಲ್ಲಿ ಪ ಬಂಗಾಳ ಮತ್ತು ತ್ರಿಪುರಾ-ಇವೆರಡೇ ಬೇರೆ ರಾಜ್ಯಗಳಿಗಿಂತ ಹೊರತಾಗಿವೆ.

ಮೂರನೇಯದಾಗಿ

ನಾವು ಆಡಳಿತೆಯನ್ನು ಸಂಪೂರ್ಣವಾಗಿ ವಿಕೇಂದ್ರೀಕರಣ ಗೊಳಿಸಿದ್ದೇವೆ. ಎಡರಂಗ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಹಲವಾರು ವರ್ಷಗಳ ವರೆಗೆ ಪಂಚಾಯತ್ ಚುನಾವಣೆಗಳು ನಡೆದೇ ಇರಲಿಲ್ಲ.

ಪಂಚಾಯತ್‌ಗಳಿಗಾಗಿ ಮೀಸಲಾಗಿದ್ದ ಹಣವನ್ನು ಭ್ರಷ್ಟ ಅಧಿಕಾರಿಗಳೂ ಮಧ್ಯವರ್ತಿಗಳೂ ನುಂಗಿ ಹಾಕುತ್ತಿದ್ದರು. ಈಗ ಪಂಚಾಯತ್‌ಗಳನ್ನು ಗುಪ್ತ ಮತದಾನದ ಮೂಲಕ ಆರಿಸಲಾಗುತ್ತದೆ. ಪಂಚಾಯತ್‌ಗಳಿಗೆ ಲಕ್ಷಾಂತರ ರೂಪಾಯಿ ಹಣ ದೊರೆಯುತ್ತಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನೆಲ್ಲ ಪಂಚಾಯತ್‌ಗಳಿಗೇ ವಹಿಸಿಕೊಡಲಾಗಿದೆ. ರಾಜ್ಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದಂತಹ ಯೋಜನೆಗಳಲ್ಲಿ ಜಂಟಿಯಾಗಿ ಪಾಲುಗೊಳ್ಳುತ್ತಿವೆ.

ನಾಲ್ಕನೆಯದಾಗಿ

ಸುಮಾರು ಶೇ. 80 ರಷ್ಟು ಬುಡಕಟ್ಟು ಜನ ಮತ್ತು ಶೇ. 60ರಷ್ಟು ಪರಿಶಿಷ್ಟ ಜಾತಿಯ ಜನರನ್ನು ವಿವಿಧ ಸಹಕಾರಿ ಸಂಸ್ಥೆಗಳ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗಿವೆ. ಇದರ ಮೇಲೆ ಮಧ್ಯವರ್ತಿಗಳಿಗಿರುವ ಹಿಡಿತವನ್ನು ತಪ್ಪಿಸುವುದೇ ನಮ್ಮ ಉದ್ದೇಶ. ಸೆಣಬನ್ನು ಈಗ ಲಾಭದಾಯಕ ಬೆಲೆಗೆ ಮಾರಲಾಗುತ್ತಿದೆ. ಕಾಂಗ್ರೆಸ್ ಆಡಳಿತವಿದ್ದಾಗ ಜಂಪೋರಿ ಬೆಟ್ಟಗಳಲ್ಲಿ ನೂರು ಕಿತ್ತಳೆ ಹಣ್ಣನ್ನು ಕೇವಲ ಆರು ರೂಪಾಯಿಗಳಿಗೆ ಕೊಂಡುಕೊಳ್ಳಬಹುದಾಗಿತ್ತು. ಈಗ ನೂರು ಕಿತ್ತಳೇ ಹಣ್ಣುಗಳ ಬೆಲೆಯನ್ನು ರೂ 35 ಎಂದು ನಿಗದಿ ಪಡಿಸಲಾಗಿದೆ. ಈ ಪ್ರದೇಶದ ಹತ್ತು ಜವಿರದೂ ಕುಟುಂಬಗಳು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಬೆಲೆಯ ಕಿತ್ತಳೆ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದೆಲ್ಲ ಎಷ್ಟು ಜನಕ್ಕೆ ಗೊತ್ತು ? ಇನ್ನೊಂದು ವಿಷಯ-ಸರ್ಕಾರ ಖಾಸಗೀ ಕಂಟ್ರಾಕ್ಟರುಗಳ ಮೇಲೆ ಅವಲಂಬಿಸಿಕೊಂಡಿಲ್ಲ. ಸರ್ಕಾರದ ಪತಿಯಿಂದ ನಡೆಸಲ್ಪಡುತ್ತಿರುವ ವಿವಿಧ ಸಂಸ್ಥೆಗಳಲ್ಲಿ ನಿರುದ್ಯೋಗಿಯವರಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ಕೆಲಸ ನೀಡಲಾಗುತ್ತಿದೆ. ಈ ಕೆಲಸಕ್ಕೆ ಸೇರುವ ಬುಡಕಟ್ಟು ಜನಾಂಗದ ಯುವಕರು ಭದ್ರತಾ ಠೇವಣಿ ಇರಿಸಬೇಕಾಗಿಲ್ಲ. ಸಂಕ್ಷಿಪ್ತವಾಗಿ, ಈ ಸಹಕಾರಿ ಸಂಸ್ಥೆಗಳು ಜನತೆಯ ರಕ್ಷಣೆಗಾಗಿರುವ ಸಾಧನಗಳಾಗಿವೆ.

ಗಣಶಕ್ತಿ

ನಿಮಗೆ ವರ್ಗ ಹೋರಾಟದಲ್ಲಿ ನಂಬುಗೆಯಿದೆ. ಎಡರಂಗವು ದಬ್ಬಾಳಿಕೆಯಿಲ್ಲದ ಸಮಾಜವೊಂದರ ನಿರ್ಮಾಣದ ಕಾರ್ಯದಲ್ಲಿ ನೆರವಾಗುತ್ತಿದೆಯೇ

ನೃಪೇನ್

ಜನತೆಗೆ ತೀರಾ ಅಗತ್ಯವಾಗಿರುವ ಪರಿಹಾರವನ್ನು ಒದಗಿಸುವುದರ ಜೊತೆಗೆ ಇಂದಿನ ವರ್ಗವ್ಯವಸ್ಥೆಯನ್ನು ಕೊನೆ ಗಾಣಿಸಬೇಕಾದುದರ ಬಗ್ಗೆ ಅವರ ಪ್ರಜ್ಞೆಯನ್ನು ಬೆಳೆಸಬೇಕಾದುದು ಎಡರಂಗದ ಗುರಿ. ಈ ದಿಸೆಯಲ್ಲಿ ಎಡರಂಗ ಎಷ್ಟು ಯಶಸ್ಸು ಸಾಧಿಸಿದೆಯೆನ್ನುವುದಕ್ಕೆ ನಮ್ಮ ಸಾಮೂಹಿಕ ಸಂಘಟನೆಗಳ ಬೆಳವಣಿಗೆಯೇ ಸಾಕ್ಷಿ. ತ್ರಿಪುರಾದ 23 ಲಕ್ಷ ಜನರಲ್ಲಿ ಮೂರನೇ ಒಂದರಷ್ಟು ಜನ ಯಾವುದಾದರೊಂದು ಸಾಮೂಹಿಕ ಸಂಘಟನೆಯ ಸದಸ್ಯರಾಗಿದ್ದಾರೆ. ಇಲ್ಲಿ ಎಲ್ಲ ಜನ ವಿಭಾಗಗಳೂ ಸಂಘಟಿತರಾಗಿದ್ದಾರೆ. ಪೋಲೀಸರು ಮತ್ತು ಗೃಹರಕ್ಷಕ ದಳದವರಿಗೂ ತಮ್ಮದೇ ಆದ ಕಾರ್ಮಿಕ ಸಂಘಟನೆಗಳಿವೆ. ದುಡಿಯುವ ಜನತೆಯ ಎಲ್ಲ ಹೋರಾಟಗಳಿಗೂ ಎಡರಂಗ ಬೆಂಬಲ ನೀಡುತ್ತಿದೆ. ಮತ್ತು ಭೂಮಾಲೀಕರು ಹಾಗೂ ಗಿರಣಿ ಮಾಲೀಕರು ತಮ್ಮ ಸ್ವಾರ್ಥಕ್ಕಾಗಿ ಪೋಲೀಸರನ್ನು ಬಳಸಲು ಸಾಧ್ಯವಿಲ್ಲದಂತಾಗಿದೆ.

ಪ್ರಜಾಸತ್ತಾತ್ಮಕ ಸಂಘಟನೆಗಳ ಬಲಕೂಡಾ ಗಮನಾರ್ಹವಾಗಿ ಬೆಳೆದಿದೆ. ಪಶ್ಚಿಮ ಬಂಗಾಳವನ್ನು ಬಿಟ್ಟರೆ ಬೇರೆ ಯಾವುದೇ ರಾಜ್ಯದಲ್ಲೂ ಜನ ತ್ರಿಪುರಾದಲ್ಲಿರುವಷ್ಟು ಸಂಘಟಿತರಾಗಿಲ್ಲ. ತಮ್ಮ ಹಕ್ಕುಗಳು ಮತ್ತು ದೇಶ ಪ್ರೇಮಿ ಕರ್ತವ್ಯಗಳ ಬಗ್ಗೆ ಇಲ್ಲಿನಷ್ಟು ಜಾಗೃತರಾಗಿಲ್ಲ.

> **ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿ ಸಾಧಿಸಿದೆ**
> **ತ್ರಿಪುರಾದ ಎಡರಂಗ ಸರಕಾರ**
> **ಸಹಕಾರಿ ಸಂಘಗಳ ಮೂಲಕ ಮಧ್ಯವರ್ತಿಗಳ ಕಂಟ್ರಾಕ್ಟರರ ಹಿಡಿತ ತಪ್ಪಿಸಿ,**
> **ದುಡಿಯುವವರಿಗೇನೇ ಪೂರ್ಣ ಲಾಭ ಸಿಗುವಂತೆ ಮಾಡಿದೆ**
> **ತ್ರಿಪುರಾದ ಎಡರಂಗ ಸರಕಾರ**

ಗಣಶಕ್ತಿ

ತ್ರಿಪುರಾದಲ್ಲಿ ತೀವ್ರಗತಿಯ ಔದ್ಯಮೀಕರಣ ಮತ್ತು ರೈಲ್ವೇ ಮಾರ್ಗಗಳ ವಿಸ್ತರಣೆಯ ಬಗ್ಗೆ ಕೇಂದ್ರ ಸರ್ಕಾರ ಏನೂ ಕ್ರಮ ಕೈಗೊಳ್ಳುತ್ತಿಲ್ಲವೆಂದು ನೀವು ಆರೋಪಿಸಿದ್ದೀರಿ. ಪರಿಸ್ಥಿತಿ ಹೀಗಿರುವಾಗ, ನೀವು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವ ಬಗೆ ಹೇಗೆ ?

ನೃಪೇನ್

ನಮ್ಮ ಈ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಕಿವುಡಾಗಿದೆ. ಇದು ಸತ್ಯ. ರಾಷ್ಟ್ರೀಯ ಸಮಗ್ರತೆಯನ್ನು ಬೆಳೆಸಲು ರೈಲು ಮಾರ್ಗಗಳನ್ನು ವಿಸ್ತರಿಸುವುದು ತೀರಾ ಅಗತ್ಯ. ನಾವು ಈ ಬೇಡಿಕೆಗಳಿಗಾಗಿ ಈಗಲೂ ಒತ್ತಾಯಿಸುತ್ತಿದ್ದೇವೆ.

ನಾವು ರಾಜ್ಯದಲ್ಲಿ ರಬ್ಬರ್ ತೋಟಗಳು, ಅರಣ್ಯ ಮತ್ತು ಪಶುಸಂಗೋಪನೆ ಹಾಗೂ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸುತಿದ್ದೇವೆ. ರಬ್ಬರ್ ಬೆಳೆಯಲ್ಲಿ ತ್ರಿಪುರಾ ಕೇರಳದ ನಂತರ ಎರಡನೇ ಸ್ಥಾನಗಳಿಸಿದೆ. ತೀರಾ ಇತ್ತೀಚೆಗೆ ರೂ. 3 ಕೋಟಿ ವೆಚ್ಚದಲ್ಲಿ ರಾಜ್ಯದ ಮೊದಲನೇ ರಬ್ಬರ್ ಕಾರ್ಖಾನೆಯನ್ನು ದಕ್ಷಿಣ ತ್ರಿಪುರಾದಲ್ಲಿ ಪ್ರಾರಂಭಿಸಲಾಗಿದೆ. ಉದ್ಯೋಗಾವಕಾಶಗಳನ್ನು ನಿರ್ಮಿಸುವ ಸಲುವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನೂ ಅಭಿವೃದ್ಧಿ ಪಡಿಸಲು ಯತ್ನಿಸಲಾಗುತ್ತಿದೆ.

ಗಣಶಕ್ತಿ

ಕೇಂದ್ರ ಸರ್ಕಾರವೂ ಸಾಕಷ್ಟು ಸಂಖ್ಯೆಯಲ್ಲಿ ಅರೇ ಸೈನಿಕ ಪಡೆಗಳನ್ನು ಕಳುಹಿಸಿಕೊಟ್ಟರೆ ತ್ರಿಪುರಾ ನ್ಯಾಶನಲ್ ವಾಲಂಟೀಯರ್ಸ್ (ಟಿ ಎನ್.ವಿ.) ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಬಹುದೆಂದು ನಿಮಗನಿಸುತ್ತದೆಯೇ ?

ನೃಪೇನ್

ಇದೀಗ ಜಗತ್ತಿನ ಎಲ್ಲಾ ಬಂಡವಾಳಶಾಹಿಗಳ ರಾಷ್ಟ್ರಗಳಲ್ಲೂ ಭಯೋತ್ಪಾದಕತೆಯೊಂದು ಅಂತರಾಷ್ಟ್ರೀಯ ಸಮಸ್ಯೆಯಾಗಿ ಬಿಟ್ಟಿದೆ. ಕೇವಲ ರಾಷ್ಟ್ರೀಯ ಸಮಸ್ಯೆ ಅಲ್ಲ. ಟಿ.ಎನ್.ವಿ. ಭಯೋತ್ಪಾದಕರು ಬಂಗ್ಲಾ ದೇಶದಲ್ಲಿ ಆಶ್ರಯ ಪಡೆದಿರುವಂತೆ ಖಾಲಿಸ್ತಾನಿ ಉಗ್ರಗಾಮಿಗಳು ಪಾಕಿಸ್ತಾನದಲ್ಲಿ ಆಶ್ರಯ ಪಡೆದಿದ್ದಾರೆ. ಅವರ ಹಿಂದೆ ಸಾಮ್ರಾಜ್ಯಶಾಹಿಗಳಿದ್ದಾರೆ. ಭಾರತದಲ್ಲಿ ಮತ್ತು ಇತರ ದೇಶಗಳಲ್ಲಿ ಕೂಡಾ ವಿದೇಶಿ ಶಕ್ತಿಗಳು ಮುಖ್ಯವಾಗಿ ಅಮೇರಿಕಾದ ಕೈವಾಡವಿದೆ. ಭಾರತದಲ್ಲಿ ಮಾತ್ರವಲ್ಲದೆ ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾ ದೇಶದಲ್ಲಿಯೂ ಸಿ.ಐ.ಎ. ತನ್ನ ಹೂಟದಲ್ಲಿ ಯಶಸ್ವಿಯಾಗಿದೆ. ಭಯೋತ್ಪಾದಕರ ಒಂದು ಗುಂಪನ್ನು ನಿಗ್ರಹಿಸುವಾಗಲೇ ಇನೊಂದು ಗುಂಪು ತಲೆಯೆತ್ತಲಾರಂಭಿಸುತ್ತದೆ. ನಮ್ಮ ದೇಶದಲ್ಲೂ ಸ್ವಾತಂತ್ರ್ಯವನ್ನು ನಾಶಗೊಳಿಸುವುದು ಅವರ ಗುರಿ. ಇಂತಹ ಸನ್ನಿವೇಶದಲ್ಲಿ ಹಾದಿ ತಪ್ಪುತ್ತಿರುವ ಈ ಯುವಜನರನ್ನು ಸರಿದಾರಿಗೆ ಮರಳಿ ತರುವುದೇ ನಮ್ಮ ಮುಖ್ಯ ಉದ್ದೇಶ. ರಾಷ್ಟ್ರೀಯ ಭಾವೈಕ್ಯತೆಯ ಸಾಧನೆಗೂ ಇದೇ ಮಾರ್ಗ-

ಇದರಲ್ಲಿ ಭಯೋತ್ಪಾದಕರ ಬಗ್ಗೆ ನಾವು ಮೆದುವಾದ ನಿಲುವು ತಳೆಯುತ್ತೇವೆಂದೇನೂ ಅಲ್ಲ. ಜನಾಂಗೀಯ ದ್ವೇಷ ಈ ಜನರ ಕಣ್ಣನ್ನು ಕುರುಡಾಗಿಸಿದೆ. ಕಳೆದ ಎರಡು ತಿಂಗಳ ಅವಧಿಯಲ್ಲೇ ಬುಡಕಟ್ಟು ಜನಾಂಗಕ್ಕೆ ಸೇರಿರದ ಐವತ್ತಕ್ಕೂ ಹೆಚ್ಚು ಮುಗ್ಧ ಜನ ಈ ಫ್ಯಾಸಿಸ್ಟ್ ಕೊಲೆಗಡುಕರ ಕೈಯಲ್ಲಿ ಹತ್ಯೆಯಾಗಿದ್ದಾರೆ. ಕೇಂದ್ರ ಸರಕಾರ ಸಾಕಷ್ಟು ಪ್ರಮಾಣದಲ್ಲಿ ಅರೆ ಸೈನಿಕ ಪಡೆಗಳನ್ನು ನಮಗೆ ನೀಡದಿರುವುದರಿಂದಾಗಿ ಇಂತಹ ಆಕ್ರಮಣಗಳ ವಿರುದ್ಧ ಬಲವಾದ ರಕ್ಷಣೆ ನೀಡುವುದು ಸಾಧ್ಯವಾಗದೆ ಹೋಯಿತು. ಬಾಂಗ್ಲಾದೇಶದ ಗಡಿಯ ಪಹರೆ ನಡೆಸುವುದಕ್ಕೆ ಬೇಕಾಗುವಷ್ಟು ಗಡಿ ಭದ್ರತಾದಳ ನಮ್ಮಲ್ಲಿ ಇಲ್ಲ. ಗಡಿ ಪ್ರದೇಶದಲ್ಲಿ ಜೀಪ್‌ಗಳು ಸಂಚರಿಸಬಲ್ಲ ರಸ್ತೆಗಳೂ ಇಲ್ಲ. ಅರಣ್ಯ ಪ್ರದೇಶದಲ್ಲಿ ಹೋರಾಟ ನಡೆಸಲು ತರಬೇತಾಗಿರುವ ಅಸ್ಸಾಂ ರೈಫಲ್ಸ್ ಪಡೆಯ ನೆರವು ನಮಗೆ ದೊರೆತರೆ ನಾವು ಟಿ.ಎನ್.ವಿ. ಭಯೋತ್ಪಾದಕರನ್ನು ಹಿಮ್ಮೆಟ್ಟಿಸಬಹುದು.

ಗಣಶಕ್ತಿ

'ತ್ರಿಪುರಾ' ರಾಜ್ಯವನ್ನು 'ಗಲಭೆ ಪೀಡಿತ ಪ್ರದೇಶ' ವೆಂಬುದಾಗಿ ಸಾರಬೇಕೆಂದೂ ರಾಜ್ಯಕ್ಕೆ ಸೈನ್ಯವನ್ನು ರವಾನಿಸಬೇಕೆಂದೂ ರಾಜ್ಯದ ಕಾಂಗ್ರೆಸ್(ಐ) ಅಧ್ಯಕ್ಷರು ಆಗ್ರಹಿಸಿದ್ದಾರೆ. ರಾಜ್ಯಕ್ಕೆ ಇನ್ನೂ ಹೆಚ್ಚಿನ ಅರೆಸೈನಿಕ ಪಡೆಗಳನ್ನು ಕಳುಹಿಸಿದರೆ ಅದು ನಿಮ್ಮ ಮೇಲೆ ಹೆಚ್ಚಿನ ಆರ್ಥಿಕ ಒತ್ತಡವುಂಟು ಮಾಡುವುದಿಲ್ಲವೇ? ನಿಮ್ಮ ಅಭಿಪ್ರಾಯವೇನು?

ನೃಪೇನ್ ಚಕ್ರವರ್ತಿ

ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ [ಐ] ಹಲವಾರು ತುಣುಕುಗಳಾಗಿ ಒಡೆದು ಹೋಗಿದೆ. ಹಾಗಿರುವಾಗ ಇದರಲ್ಲಿ ಯಾರ ಪ್ರತಿನಿಧಿಯಾಗಿ ಅವರು ಈ ಬೇಡಿಕೆಯನ್ನು ಮುಂದೊಡ್ಡಿದ್ದಾರೊ ನನಗೆ ಗೊತ್ತಿಲ್ಲ. ಬುಡಕಟ್ಟು ಜನರ ನಡುವೆ ಕಾಂಗ್ರೆಸ್(ಐ) ಯಾವುದೇ ಬೆಂಬಲವಿಲ್ಲ;ಹಾಗಾಗಿ ಅದು ಟಿ.ಯು.ಜೆ.ಎಸ್.(ತ್ರಿಪುರಾ ಉಪಜಾತಿ ಯುವ ಸಮಿತಿ)ನಂತಹ ಪ್ರತ್ಯೇಕವಾದಿ ಪಕ್ಷದ ಜೊತೆ ಸೇರಿಕೊಂಡಿದೆ 'ಎಡರಂಗವನ್ನು ಕಿತ್ತೊಗೆಯಿರಿ' ಎನ್ನುವುದೊಂದೇ ಅವರ ಘೋಷಣೆ. ಬುಡಕಟ್ಟು ಜನತೆಯ ಮೇಲೆ ಕಾಂಗ್ರೆಸ್(ಐ) ನವರು ವಸ್ತುಶಃ ಯುದ್ಧವನ್ನೇ ಸಾರಿ ಬಿಟ್ಟಿದ್ದಾರೆ. ಅದಕ್ಕೇ ಸೈನ್ಯವನ್ನು ರವಾನಿಸಬೇಕೆಂದು ಅವರ ಬೇಡಿಕೆ.ಇದಕ್ಕೆ ವಿರುದ್ಧವಾಗಿ ನಾವು ಬುಡಕಟ್ಟು ಜನ ಹಾಗೂ ಬುಡಕಟ್ಟು ಜನಾಂಗಗಳಿಗೆ ಸೇರಿರದ ಜನರ ಐಕ್ಯರಂಗವೊಂದನ್ನು ಕಟ್ಟಿ ಅದರ ಮೂಲಕ ಭಯೋತ್ಪಾದಕತೆಗೆದಿರಾಗಿ ಹೋರಾಟ ನಡೆಸುತಿದ್ದೇವೆ.ಇದರಲ್ಲಿ ನಮ್ಮ ಅನೇಕ ಸಂಗಾತಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಟಿ ಯು.ಜೆ.ಎಸ್. ಕೂಡಾ ಟಿ.ಎನ್.ವಿ. ಗೆ ಪರೋಕ್ಷವಾಗಿ ಬೆಂಬಲನೀಡು

[7ನೇ ಪುಟ ನೋಡಿ]

ಆರ್ಥಿಕ ಸಮೀಕ್ಷೆ :

ರಾಜೀವಗಾಂಧಿಯ ಮುಂಗಡಪತ್ರ : 1987-88 ನೆಹರೂಸ್ಫೂರ್ತಿ ರೇಗನ್‌ರ ಪರಿಹಾರ !

ಆರ್. ಚಂದ್ರ

ಔಪಚಾರಿಕ ಮುಂಗಡಪತ್ರ

ಹಿಂದಿನ ವರ್ಷಗಳಂತೆಯೇ ಈ ವರ್ಷವೂ ಫೆಬ್ರವರಿ 25 ಮತ್ತು 28ರಂದು 1987-88ನೇ ವರ್ಷದ ರೈಲ್ವೆ ಮತ್ತು ಇತರ ಕೇಂದ್ರ ಖಾತೆಗಳ ಮುಂಗಡ ಪತ್ರಗಳನ್ನು ಸಂಸತ್ತಿನಲ್ಲಿ ಔಪಚಾರಿಕವಾಗಿ ಮಂಡಿಸಲಾಯಿತು. ಕಾರಣ, ಈ ಮೊದಲೇ ಮೂರು-ನಾಲ್ಕು ತಿಂಗಳ ಪೂರ್ವಾನ್ವಯವಾಗಿ ಅಂಚೆ-ತಂತಿಗಳ ಮತ್ತು ರೈಲ್ವೆ ರಿಗೆಗಳ ದರ ಏರಿಕೆಗಳಿಂದ 1987-88ನೇ ವರ್ಷಕ್ಕೆ ಅನುಕ್ರಮವಾಗಿ ರೂ1386ಕೋಟಿ ಮತ್ತು ರೂ 1030ಕೋಟಿ [ಒಟ್ಟು ರೂ2416 ಕೋಟಿ!] ರಷ್ಟು ಅಧಿಕ ಆದಾಯ ಪಡೆಯುವ ಕ್ರಮಕ್ಕೈಗೊಳ್ಳಲಾಗಿತ್ತು. ರೈಲ್ವೆ ಮುಂಗಡ ಪತ್ರದಲ್ಲಿ ಪ್ರಯಾಣ ಮತ್ತು ಸಾರಿಗೆ ದರಗಳನ್ನು ಏರಿಸದೆ, ರೂ69 ಕೋಟಿಯಷ್ಟು ಹೆಚ್ಚುವರಿ ಆದಾಯ ತೋರಿಸಲಾಗಿದೆ. ಕೇಂದ್ರ ಮುಂಗಡ ಪತ್ರದಲ್ಲಿ ರೂ964 ಕೋಟಿಯಷ್ಟು ಹೊಸತೆರಿಗೆಗಳನ್ನು ವಿಧಿಸಿ, ರೂ595ಕೋಟಿಯಷ್ಟು ವಿವಿಧ ಕ್ಷೇತ್ರಗಳಿಗೆ ತೆರಿಗೆ ರಿಯಾಯಿತಿ ಕೊಟ್ಟು, ನಿವ್ವಳ ರೂ367 ಕೋಟಿಯಷ್ಟು ಹೆಚ್ಚುವರಿ ತೆರಿಗೆ ಹೇರಿ,ವರ್ಷದ ಆಯವ್ಯಯ ಸರಿ ತೂಗಿಸಲಾರದೆ ರೂ5688 ಕೋಟಿಯಷ್ಟು ಕೊರತೆ ತೋರಿಸಲಾಗಿದೆ. ಕಳೆದ ವರ್ಷವೂ ಮುಂಗಡ ಪತ್ರ (1986-87) ಪ್ರಕಟಿಸುವ ಮೊದಲೇ ಕಲ್ಲಿದ್ದಲು,ಗೊಬ್ಬರ,ಆಹಾರ ಧಾನ್ಯಗಳು,ಪೆಟ್ರೋಲಿಯಂ ಪದಾರ್ಥಗಳು,ಇತ್ಯಾದಿ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಏರಿಸಿ ವರ್ಷಕ್ಕೆ ರೂ 2000ಕೋಟಿಯಷ್ಟು ಅಪ್ರತ್ಯಕ್ಷ ತೆರಿಗೆಯ ಭಾರ ಜನಸಾಮಾನ್ಯರ ಮೇಲೆ ಹೊರಿಸಲಾಗಿತ್ತು. ನಂತರ ಸಂಸತ್ತಿನಲ್ಲಿ ಔಪಚಾರಿಕವಾಗಿ ರೈಲ್ವೆ ಮತ್ತು ಇತರ ಇಲಾಖೆಗಳ ಮುಂಗಡ ಪತ್ರಗಳಲ್ಲಿ ಅನುಕ್ರಮವಾಗಿ ರೂ76 ಕೋಟಿ ಮತ್ತು ರೂ446 ಕೋಟಿ ಅಪ್ರತ್ಯಕ್ಷ ತೆರಿಗೆಗಳನ್ನು ವಿಧಿಸಿ, ರೂ 3650 ಕೋಟಿ ಕೊರತೆ ತೋರಿಸಲಾಗಿತ್ತು. ಮುಂದೆ, ವರ್ಷಾಂತ್ಯದಲ್ಲಿ ಈ ಕೊರತೆ ರೂ 8285 ಕೋಟಿಗೇರಿತು! ಈ ವರ್ಷ ಮುಂಗಡ ಪತ್ರದ ಮುಂಚೆ ರೈಲ್ವೆ ಅಂಚೆ-ತಂತಿ ದರಗಳನ್ನು ಏರಿಸದ್ದರೆ ಈ ಕೊರತೆಯು ರೂ 10000ಕೋಟಿಗೂ ಮೀರುತ್ತಿತ್ತು!

ಕೇಂದ್ರ ಸರಕಾರ ಆಡಳಿತ, ರಕ್ಷಣೆ, ಆರ್ಥಿಕ ಅಭಿವೃದ್ಧಿಗಳಿಗೆ ಸಂಪನ್ಮೂಲ ಪಡೆಯುವ ವಿಷಯದಲ್ಲಿ ವಾರ್ಷಿಕ ಮುಂಗಡ ಪತ್ರಗಳ ಪಾತ್ರ ತೀರಾ ಗೌಣವಾಗುತ್ತದೆ. ಮುಂಗಡ ಪತ್ರದ ಮುಂಚೆ,ಸಂಸತ್ತಿನ ಹೊರಗೆ ಏಕಪಕ್ಷೀಯವಾಗಿ ಸಾರ್ವಜನಿಕರಂಗದ ಸರಕುಗಳ ಹಾಗೂ ಸೇವಾ ಸೌಲಭ್ಯಗಳ ಬೆಲೆಗಳನ್ನೇರಿಸುವುದೂ ನಂತರಆಯವ್ಯಯಗಳನ್ನು ಸರಿದೂಗಿಸುವುದು ಅಸಾಧ್ಯವಾಗಿ ಅನಿಯಂತ್ರಿತ ಪ್ರಮಾಣದಲ್ಲಿ ಕೊರತೆ ಹಣ ಸೃಷ್ಟಿಮಾಡುವುದು ನಡೆಯುತ್ತಿದೆ. ಪರಿಣಾಮವಾಗಿ, ಹಣದುಬ್ಬರ ಮತ್ತು ಆರ್ಥಿಕ ದುಸ್ಥಿತಿ ಇನ್ನಷ್ಟು ತೀವ್ರಗೊಳ್ಳಲಿವೆ;ಇಡೀ ಆರ್ಥಿಕ ವ್ಯವಸ್ಥೆಯ ತಳಪಾಯವೇ ದುರ್ಬಲಗೊಳ್ಳಲಿದೆ.

ನೆಹರೂ ಸ್ಫೂರ್ತಿ,ರೇಗನ್‌ರ ಪರಿಹಾರ!

ಪ್ರಧಾನಿ ರಾಜೀವ್ ಗಾಂಧಿ ಹಣಕಾಸು ಮಂತ್ರಿಯಾಗಿ ತನ್ನ ಮುಂಗಡ ಪತ್ರದ ಘನ ಉದ್ದೇಶಗಳನ್ನು ಪುನಃ ಘೋಷಿಸಿದ್ದಾರೆ-ಬಡತನ ದಾರಿದ್ರ್ಯ ನಿರ್ಮೂಲನೆ, ಶಿಕ್ಷಣ ಮತ್ತು ಕೃಷಿ ಉತ್ಪಾದನೆಗೆ ಪ್ರಾಶಸ್ತ್ಯ, ಬಂಡವಾಳ ಸಂಕುಗಳ ಉದ್ದಿಮೆಗಳಿಗೆ ಉತ್ತೇಜನ, ಉಳಿತಾಯಕ್ಕೆ ಪ್ರೇರಣೆ, ಇತ್ಯಾದಿ. ಇಂತಹ ಉದ್ದೇಶಗಳನ್ನು ಕಳೆದ 40 ವರ್ಷಗಳಿಂದಲೂ ಹೇಳುತ್ತಾ ಬರಲಾಗಿದೆ. ರಾಜೀವ ಗಾಂಧಿ ತನ್ನ ಮುಂಗಡ ಪತ್ರದ ಭಾಷಣಕ್ಕೆ 29ವರ್ಷಗಳ ಹಿಂದಿನ ಜವಾಹರಲಾಲ್ ನೆಹರು ಅವರ ಮುಂಗಡ ಪತ್ರದ ಭಾಷಣವೇ ಸ್ಫೂರ್ತಿ ಎಂದಿದ್ದಾರೆ. "ನಾವು ಇರುವ ಈ ಸಮಯ ಹಾಗೂ ನಮ್ಮ ದೇಶದ ಸಮಸ್ಯೆಗಳು ಸಂತೃಪ್ತ ನಿಲುವು ತಾಳುವುದಕ್ಕೆ ಅವಕಾಶ ನೀಡುವುದಿಲ್ಲ,ನಮ್ಮ ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಉತ್ಪಾದನೆಯನ್ನು ಹೆಚ್ಚಿಸಿ, ಸಂಪತ್ತಿನ ವಿತರಣೆ ಹೆಚ್ಚು ಸಮಪ್ರಮಾಣದಲ್ಲಿ ನಡೆಯುವಂತೆ ಮಾಡಿ, ಆ ಮೂಲಕ ಜನಸಾಮಾನ್ಯರ ಜೀವನ ಮಟ್ಟ ಹೆಚ್ಚಿಸಿ ಯೋಜಿತ ಅಭಿವೃದ್ಧಿ ಸಾಧಿಸಲು ನಾವು ಶತಪ್ರಯತ್ನ ಮಾಡಬೇಕು" ಎಂದು ಆಗ ನೆಹರು ಹೇಳಿದ್ದರು. ಈಗಲೂ ರಾಜೀವ ಗಾಂಧಿ ಅದನ್ನೇ ಹೇಳುತ್ತಿದ್ದಾರೆ! ಅಂದರೆ, 29 ವರ್ಷಗಳ ನಂತರವೂ ಪರಿಸ್ಥಿತಿ ಹಿಂದಿನಂತೆಯೇ ಉಳಿದಿದೆ ಎಂದು ಒಪ್ಪಿಕೊಂಡಂತಾಗಲಿಲ್ಲವೇ ?

ಹಿಂದೆ ನೆಹರು ದೇಶದ ಆರ್ಥಿಕ ಅಭಿವೃದ್ಧಿಗೆ,ಬಡತನ ದಾರಿದ್ರ್ಯ ನಿವಾರಣೆಗೆ, 'ಬಂಡವಾಳಶಾಹೀ ಚೌಕಟ್ಟಿನಲ್ಲಿ' ಪಂಚವಾರ್ಷಿಕ ಯೋಜನೆ, ಸಾರ್ವಜನಿಕ ಕ್ಷೇತ್ರದ ಪ್ರಾಧಾನ್ಯತೆ, ಏಕಸ್ವಾಮ್ಯ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಮೇಲೆ ನಿಯಂತ್ರಣ, ಸ್ವಾವಲಂಬನೆ,ಭೂಸುಧಾರಣೆ,ಆಸ್ತಿ-ಆದಾಯ ಸಂಪತ್ತುಗಳ ಮೇಲೆ ಏರಿಕೆಯ ದರದಲ್ಲಿ ಪ್ರತ್ಯಕ್ಷ ತೆರಿಗೆ, ಕಲ್ಯಾಣ ಕಾರ್ಯಗಳ ಮೂಲಕ ಜನಸಾಮಾನ್ಯರಿಗೆ ಸಾಮಾಜಿಕ ನ್ಯಾಯ, ಇತ್ಯಾದಿ ಪರಿಹಾರ ಮಾರ್ಗಗಳನ್ನು ಜನರ ಮುಂದಿರಿಸಿ 'ಸಮಾಜವಾದಿ ಸಮಾಜ' ಸ್ಥಾಪನೆಯ ಭ್ರಮೆ ಹುಟ್ಟಿಸಿದ್ದರು. ಈಗ ರಾಜೀವ ಗಾಂಧಿ ಭಾಷಣದಲ್ಲಿ ನೆಹರೂ ಸ್ಫೂರ್ತಿ ಪ್ರದರ್ಶಿಸುತ್ತಾ, ಆಚರಣೆಯಲ್ಲಿ ಅವರ ಆರ್ಥಿಕ ಗುರು–ಅಮೇರಿಕದ ಅಧ್ಯಕ್ಷ ರೇಗನ್ ಅವರನ್ನು ಅನುಸರಿಸುತ್ತಿದ್ದಾರೆ! ಅಂದರೆ ಮುಂದಿನ ರಾಜ್ಯ ವಿಧಾನಸಭಾ ಚುನಾವಣೆಗಳಿಗಾಗಿ [ಜಮ್ಮು-ಕಾಶ್ಮೀರ, ಹರಿಯಾಣ, ಪ. ಬಂಗಾಳ,ಕೇರಳ]ನೆಹರೂ ಸ್ಫೂರ್ತಿಯ ಪ್ರದರ್ಶನ! ಜೊತೆಗೇ 40ವರ್ಷಗಳಿಂದ 'ಸಮಾಜವಾದಿ' ತೆರೆಯ ಮರೆಯಲ್ಲಿ ಬೃಹದಾಕಾರವಾಗಿ ಬೆಳೆದ ಟಾಟಾ ಬಿರ್ಲಾ ಮುಂತಾದ ಹತ್ತಾರು ಏಕಸ್ವಾಮ್ಯ ಸಂಸ್ಥೆಗಳ ಹಾಗೂ ಅಮೇರಿಕಾ-ಪ. ಯುರೋಪ್-ಜಪಾನ್ ದೇಶಗಳ ಬಹುರಾಷ್ಟ್ರೀಯ ಸಂಸ್ಥೆಗಳ ಬಂಡವಾಳಕ್ಕೆ ದೇಶದ ಒಳಗೂ ಹೊರಗೂ ಅತಿ ಲಾಭಗಳಿಸಲು ರೇಗನ್ ಮಾದರಿಯ ಪರಿಹಾರೋಪಾಯಗಳು! ಇಷ್ಟು ಕಾಲ ಈ ವಿಷಯ ಊಹಾಪೋಹವಾಗಿತ್ತು. ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಅಂತರಾಷ್ಟ್ರೀಯ ಚೇಂಬರ್ ಆಫ್ ಕಾಮರ್ಸ್‌ನ 29ನೇ ಅಧಿವೇಶನದಲ್ಲಿ ತನ್ನ ಹೊಸ ಆರ್ಥಿಕ ನೀತಿಯು ರೇಗನ್‌ರ ಆರ್ಥಿಕ ನೀತಿಗನುಗುಣವಾಗಿದೆ ಎಂದು ನಿರ್ಭೀತಿಯಿಂದ ರಾಜೀವ ಗಾಂಧಿ ಹೇಳಿದ್ದಾರೆ.

ಈ ಧೋರಣೆಯಂತೆ: 1] ಸಾರ್ವಜನಿಕ ವೆಚ್ಚವನ್ನು ಕಡಿಮೆಗೊಳಿಸಲು, ಸಾರ್ವಜನಿಕ ಕ್ಷೇತ್ರದ ಕೈಗಾರಿಕೋದ್ಯಮದಲ್ಲಿ ಹೊಸ ಬಂಡವಾಳ ಹೂಡುವುದನ್ನು ಕಡಿಮೆ ಮಾಡುವುದು, ಆರ್ಥಿಕ ಅಭಿವೃದ್ಧಿಯಲ್ಲಿ ಸಾರ್ವಜನಿಕ ಕ್ಷೇತ್ರದ ಪ್ರಧಾನ ಸ್ಥಾನವನ್ನು ಬಿಟ್ಟುಬಿಡುವುದು, ಸಾರ್ವಜನಿಕ ಕಲ್ಯಾಣ ಕಾರ್ಯಗಳ ಮತ್ತು ಕೃಷಿ, ಕೈಗಾರಿಕೆ, ರಫ್ತು, ಇತ್ಯಾದಿ ವಿಷಯಗಳಿಗೆ ಸಹಾಯಧನಗಳ ವೆಚ್ಚ ಕಡಿಮೆ ಮಾಡುವುದು,ಸಾರ್ವಜನಿಕ ಕ್ಷೇತ್ರದಲ್ಲಿನ ನೌಕರರ ಮತ್ತು ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುವುದು.... 2] ಆರ್ಥಿಕ ಅಭಿವೃದ್ಧಿಯಲ್ಲಿ ಖಾಸಗೀ ಕ್ಷೇತ್ರಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುವುದು, ಅಗತ್ಯವಿದ್ದರೆ ಸಾರ್ವಜನಿಕ ಕ್ಷೇತ್ರದ ಕೆಲವು ಉದ್ಯಮಗಳನ್ನು ಖಾಸಗೀ ಕ್ಷೇತ್ರಕ್ಕೆ ಬಿಟ್ಟುಕೊಡುವುದು,ಉದ್ಯೋಗಕ್ಕಿಂತಲೂ ಉತ್ಪಾದನೆಗೆ ಹೆಚ್ಚು ಪ್ರಾಶಸ್ತ್ಯ ಕೊಡುವುದು, ಆಂತರಿಕ ಹಾಗೂ ವಿದೇಶಿ ಸಂಪನ್ಮೂಲಗಳು ಖಾಸಗೀ ರಂಗಕ್ಕೆ ಹೆಚ್ಚು ಹರಿದುಬರುವಂತೆ ಮಾಡುವುದು.... 3] ಸರಕಾರದ ಅಳಿದುಳಿದ ವೆಚ್ಚಗಳಿಗೆ ಹೆಚ್ಚಾಗಿ ಅಪ್ರತ್ಯಕ್ಷ ತೆರಿಗೆಗಳನ್ನು, ಕೊರತೆ ಹಣ ಸೃಷ್ಟಿಯನ್ನು ಅವಲಂಬಿಸಿರುವುದು ಮತ್ತು ಕಂಪನಿಗಳ ಹಾಗೂ ವ್ಯಕ್ತಿಗಳ ಆಸ್ತಿ-ಆದಾಯ-ಸಂಪತ್ತುಗಳ ಮೇಲಿನ ಪ್ರತ್ಯಕ್ಷ ತೆರಿಗೆಗಳನ್ನು ಕಡಿಮೆಗೊಳಿಸುವುದು, ದೇಶ ವಿದೇಶಗಳಿಂದ ಅಧಿಕ ಬಡ್ಡಿದರದಲ್ಲಿ ಸಾಲ ಎತ್ತುವುದು.... 4] ವಿದೇಶಿ ಬಂಡವಾಳಕ್ಕೆ-ಬಹುರಾಷ್ಟ್ರೀಯ ಸಂಸ್ಥೆಗಳ ವ್ಯಾಪಾರೋದ್ಯಮಗಳಿಗೆ ದೇಶದಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸುವುದು-ಸಡಿಲ ಆಮದು ನೀತಿ, ಸಡಿಲ ನಿಯಂತ್ರಣ ಲೈಸನ್ಸ್ ನೀತಿ, ಲಾಭಗಳಿಕೆಯನ್ನು ತಮ್ಮ ದೇಶಗಳಿಗೆ ಮರು ಪಾವತಿ ಮಾಡಲು ಸವಲತ್ತುಗಳು, ಇತ್ಯಾದಿ........

ಅರ್ಥಾತ್, ರಾಜೀವ್ ಗಾಂಧಿ ಅನುಸರಿಸುತ್ತಿರುವ ರೇಗನ್ ಪರಿಹಾರವು "ಶ್ರೀಮಂತರಿಗೆ ಹೆಚ್ಚು ಹಣ ಸಂಪಾದಿಸುವ ಅವಕಾಶವಿತ್ತರೆ, ಅವರು ಹೆಚ್ಚು ಚೆನ್ನಾಗಿ ಶ್ರಮಿಸುವರು, ಉತ್ಪಾದನೆ–ಅಭಿವೃದ್ಧಿ ಹೆಚ್ಚುವುದು, ಒಡವರಿಗೆ ಕಡಿಮೆ ಹಣ ಸಂಪಾದಿಸುವ ಪರಿಸ್ಥಿತಿ ನಿರ್ಮಿಸಿದರೆ, ಅವರು ತಮ್ಮ ಹಿಂದಿನ ಜೀವನ ಮಟ್ಟವನ್ನು ಕಾಪಾಡಿಕೊಳ್ಳಲು ಹೆಚ್ಚು ಆಸಕ್ತಿಯಿಂದ ಶ್ರಮಿಸುವರು, ಉತ್ಪಾದನೆ-ಅಭಿವೃದ್ಧಿ ಹೆಚ್ಚುವುದು..." ಎಂಬ ಅಸಹ್ಯಕರ ನಿಷ್ಠುರ ವಾದವಾಗಿದೆ. ಬಡತನ ದಾರಿದ್ರ್ಯ ನಿವಾರಣೆ ಆಗಬೇಕಾದರೆ, ಬಡವರು ಇನ್ನಷ್ಟು ಬಡವರಾಗಬೇಕು, ನಿರುದ್ಯೋಗ ಹೆಚ್ಚಬೇಕು, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಬೇಕು, ಅವರ ಉದ್ಯಮಗಳ ಲಾಭ ಇನ್ನೂ ಹೆಚ್ಚಬೇಕು–ಹೀಗಿದೆ ಬಂಡವಾಳವಾದದ ವಿಚಿತ್ರ ಪರಿಹಾರ : ದುಡಿಯುವ ಜನರಿಗೆ ಕಡಿಮೆ ಕೂಲಿ ಸಂಬಳ ಪ್ರತಿಫಲ ಕೊಟ್ಟು, ಅಧಿಕ ಉತ್ಪಾದನೆ ಮಾಡಿ, ಅಧಿಕ ಬೆಲೆಗೆ ಮಾರಲು ಹೊರಟಾಗ, ಗ್ರಾಹಕ ಶಕ್ತಿಯಿಲ್ಲದೆ ಉತ್ಪಾದನೆಗಳಿಗೆ–ಕೃಷಿ ಮತ್ತು ಕೈಗಾರಿಕೆಗಳಿಗೆ ಮಾರುಕಟ್ಟೆ ಇಲ್ಲದಿದ್ದಾಗ, ಬಂಡವಾಳಗಾರರು ಪುನಃ ಮಾರುಕಟ್ಟೆಗಾಗಿ ಸರಕಾರದ ನೀತಿ ನಿರೂಪಣೆಗಳನ್ನು ತಮ್ಮ ಪರವಾಗಿ ತಿರುಗಿಸಿಕೊಳ್ಳುವರು. ಈ ರೀತಿಯ ಎರಡಲಗಿನ ಶೋಷಣೆಯನ್ನು ಪ್ರತಿಭಟಿಸಲು ಕಾರ್ಮಿಕವರ್ಗ ಸಂಘಟಿತ ಹೋರಾಟ ತೀವ್ರಗೊಳಿಸುತ್ತಿರುವಾಗ, ಅದನ್ನು ಹತ್ತಿಕ್ಕಲು ಕರಾಳ ಕಾರ್ಮಿಕ ಶಾಸನಗಳು ಸಂಸತ್ತಿನ ಮುಂದೆ ಬರಲಿವೆ !

ರಾಜೀವ್‌ಗಾಂಧಿಯ ಮುಂಗಡ ಪತ್ರವನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಂಡಾಗ, ಬಂಡವಾಳಶಾಹಿ ಪರ ರಾಜಕೀಯ ಧುರೀಣರು, ಅರ್ಥಶಾಸ್ತ್ರಜ್ಞರು, ಮುಂಗಡ ಪತ್ರವನ್ನು, ಸಮಾಜವಾದಿ, ಸುಂದರ, ಮಹಾನ್ ಕೃತಿ, ಎಂದು ಹೊಗಳುತ್ತಾರೆ. ಕಂಪೆನಿಗಳ ಮತ್ತು ವೈಯಕ್ತಿಕ ಆದಾಯ ತೆರಿಗೆಗಳಲ್ಲಿ ಇನ್ನಷ್ಟು ರಿಯಾಯತಿಗಳನ್ನು ಈಸಲ ಕೊಡನೇ ಇದ್ದುದಕ್ಕೆ ರಾಜೀವ್‌ಗಾಂಧಿಯನ್ನು ಟೀಕಿಸುತ್ತಾರೆ. ಶೇರು ಮಾರುಕಟ್ಟೆಗಳಲ್ಲಿ ನಿರುತ್ಸಾಹದ ವಾತಾವರಣ ಉಂಟಾಗಿದೆ ಎಂದು ಬೊಬ್ಬಿಡುತ್ತಾರೆ. ಜನಪರರಾದ ರಾಜಕೀಯ ಧುರೀಣರು, ಅರ್ಥಶಾಸ್ತ್ರಜ್ಞರು, ಮುಂಗಡ ಪತ್ರದಲ್ಲಿ ಹಣದುಬ್ಬರ ತಡೆಗಟ್ಟುವ, ನಿರುದ್ಯೋಗ-ಬಡತನ ನಿವಾರಣೆಯ, ಜನರ ಜೀವನಮಟ್ಟ ಹೆಚ್ಚಿಸುವ ಯಾವ ಸೂಚನೆಗಳೂ ಇಲ್ಲ' ಎಂದು ವಿಷಾದಿಸುತ್ತಾರೆ. ○

ಕೇಂದ್ರ ಸರ್ಕಾರದ ಆಯವ್ಯಯದಲ್ಲಿ (87-88) ಪ್ರತಿರೂಪಾಯಿಲ್ಲಿ ಯಾವುದು ಎಷ್ಟು ?

ಆದಾಯ ರೂ.62942 ಕೋಟಿ	ಖರ್ಚು ರೂ. 62942 ಕೋಟಿ
23 ಪೈಸೆ ಅಬಕಾರಿ ತರಿಗೆ	21 ಪೈಸೆ ಕೇಂದ್ರ ಯೋಜನೆಗೆ
18 ಪೈಸೆ ವಿದೇಶಿ ವ್ಯವಹಾರದ ಮೇಲಿನ ಸುಂಕದ ತೆರಿಗೆ	17 ಪೈಸೆ ರಕ್ಷಣಾ ವೆಚ್ಚ
17 ಪೈಸೆ ಆಂತರಿಕ ಸಾರ್ವಜನಿಕ ಸಾಲ	13 ಪೈಸೆ ತೆರಿಗೆಯ ಪಾಲು(ರಾಜ್ಯಗಳಿಗೆ)
12 ಪೈಸೆ ತೆರಿಗೆಗಳ ಹೊರತಾದ ಇತರ ಆದಾಯ	12 ಪೈಸೆ } ರಾಜ್ಯ ಮತ್ತು ಕೇಂದ್ರಾಡಳಿತ
8 ಪೈಸೆ ಬಂಡವಾಳ ಖಾತೆಯ ಆದಾಯ	12 ಪೈಸೆ } ಯೋಜನೆಗಳಿಗೆ ಹಾಗೂ ಯೋಜನೆಯೇತರ ಖರ್ಚುಗಳಿಗೆ
5 ಪೈಸೆ ಕಂಪೆನಿಗಳ ಆದಾಯ ತೆರಿಗೆ	15 ಪೈಸೆ ಸಾರ್ವಜನಿಕ ಸಾಲದ ಬಡ್ಡಿ ಪಾವತಿಗೆ
4 ಪೈಸೆ ವೈಯಕ್ತಿಕ ಆದಾಯ ತೆರಿಗೆ	8 ಪೈಸೆ ಸಹಾಯ ಧನ, ಕೃಷಿ, ರಫ್ತು, ಕೈಗಾರಿಕೆ,
4 ಪೈಸೆ ವಿದೇಶಿ ಸಾಲ	2 ಪೈಸೆ ಯೋಜನೆಯೇತರ ಖರ್ಚುಗಳಿಗೆ
1 ಪೈಸೆ ಇತರ ತೆರಿಗೆಗಳು	
8 ಪೈಸೆ ಕೊರತೆ ಹಣ ಸೃಷ್ಟಿ	
100 ಪೈಸೆ ಒಟ್ಟು	100 ಪೈಸೆ

ವಿದೇಶಿ ವ್ಯಾಪಾರದಲ್ಲಿ ಭಾರಿ ಕೊರತೆ

"ನಾವು ವಿದೇಶಿ ವ್ಯಾಪಾರದಲ್ಲಿ ಭಾರೀ ಕೊರತೆಯನ್ನು ಕಾಣುತ್ತಿದ್ದೇವೆ. ಬಹಳ ಬಿಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಭಾರತದ ಆರ್ಥಿಕ ಪರಿಸ್ಥಿತಿಯು ಅನೇಕ ವರ್ಷಗಳಿಂದಲೂ ಸರಿಪಡಿಸಲಾಗದಂತಹ ತೀವ್ರ ದುಃಸ್ಥಿತಿಗೊಳಗಾಗಿವೆ. ಇವೆಲ್ಲವೂ ರಾಜೀವ್ ಗಾಂಧಿಯ ಧೋರಣೆಗಳ ದಿವಾಳಿತನವನ್ನು ಬಹಿರಂಗ ಗೊಳಿಸುವುವು".

ಕೆ.ಪಿ. ಉನ್ನಿಕೃಷ್ಣನ್, ಕಾಂಗ್ರೆಸ್ (ಎಸ್) ●

ಕೇರಳ : ರಾಜಕೀಯ ಶಕ್ತಿಗಳ ಹೊಂದಾಣಿಕೆ, ಮರು ಹೊಂದಾಣಿಕೆ

ಕೇರಳದಲ್ಲಿ ಕಾಂಗ್ರೆಸ್ ಸ್ವತಃ ಯಾವುದೇ ಚುನಾವಣೆಗೆಲ್ಲುವುದೂ ಸಾಧ್ಯವಿಲ್ಲ. 1948-49ರ ನಂತರ ಒಂದು ಬಾರಿಯೂ ಅದು ಸ್ವಂತವಾಗಿ ಮೂರನೇ ಒಂದಕ್ಕಿಂತ ಹೆಚ್ಚು ಸ್ಥಾನ ಪಡೆದಿಲ್ಲ. ಮಾತ್ರವಲ್ಲ ಯಾವ ಸಮ್ಮಿಶ್ರ ಸರಕಾರದಲ್ಲೂ ಸಕಾರಾತ್ಮಕ ಪಾತ್ರ ವಹಿಸುವುದು ಅದರಿಂದಾಗದು. ಕಾಂ. ಇ. ಎಂ. ಎಸ್. ತಮ್ಮ ಕೃತಿ "ಕೇರಳ : ಸಮಾಜ ಮತ್ತು ರಾಜಕೀಯ" ಎಂಬ ಕೃತಿಯಲ್ಲಿ ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ.

1952ರ ಚುನಾವಣೆಗಳಲ್ಲಿ ಕಾಂಗ್ರೆಸ್ ಅಲ್ಪಮತಕ್ಕಿಳಿದ ಮೂರು ರಾಜ್ಯಗಳಲ್ಲಿ ತಿರುವಾಂಕೂರು-ಕೊಚ್ಚಿನ್ ಕೂಡಾ ಒಂದು ಆದರೂ ರಚಿಸಿಕೊಂಡ ಅದರ ಅಲ್ಪಮತದ ಸರಕಾರ ಹೆಚ್ಚು ದಿನ ಬಾಳಲಿಲ್ಲ. 1954 ರಲ್ಲಿ ಮಧ್ಯಾವಧಿ ಚುನಾವಣೆಗಳ ನಂತರವೂ ಅದರ ಸ್ಥಿತಿ ಸುಧಾರಿಸಲಿಲ್ಲ. ಒಟ್ಟಾಗಿ ಚುನಾವಣೆಯಲ್ಲಿ ಹೋರಾಡಿದ್ದ ಕಮ್ಯುನಿಸ್ಟ್ ಪಕ್ಷ, ಆರ್. ಎಸ್. ಪಿ., ಪಿ. ಎಸ್. ಪಿ. ಹಾಗೂ ಕೆ. ಎಸ್. ಪಿ. ಸರ್ಕಾರ ರಚಿಸುವ ಸ್ಥಿತಿಯಲ್ಲಿದ್ದರೂ ಕಾಂಗ್ರೆಸ್‌ನ ಒತ್ತಡಕ್ಕೆ ಬಲಿಯಾದ ಪಿ. ಎಸ್. ಪಿ.ಯ ವಿಶ್ವಾಸಘಾತದಿಂದಾಗಿ ಕಾಂಗ್ರೆಸ್ ಬೆಂಬಲದೊಂದಿಗೆ ಪಿ. ಎಸ್. ಪಿ. ಯ ಅಲ್ಪಮತದ ಸರ್ಕಾರ ಅಸ್ತಿತ್ವಕ್ಕೆ ಬಂದು ಯೇನಕೇನ ಪ್ರಕಾರೇಣ ಕಮ್ಯುನಿಸ್ಟರು ಮಂತ್ರಿಮಂಡಲ ರಚಿಸುವುದನ್ನು ತಪ್ಪಿಸುವ ಉದ್ದೇಶವನ್ನಷ್ಟೇ ಹೊಂದಿದ್ದ ಕಾಂಗ್ರೆಸ್ ಈ ಸರ್ಕಾರವನ್ನು ಹೆಚ್ಚು ದಿನ ಆಳಗೊಡಲಿಲ್ಲ. ಎಡ ವಿರೋಧ ಪಕ್ಷಗಳ ಒತ್ತಡದಿಂದ ಭೂ ಸುಧಾರಣಾ ಮಸೂದೆ ಮಂಡಿಸಿದ ಕೂಡಲೇ ಆವೇಶ ಪೂರ್ಣ ಅಪಪ್ರಚಾರ ನಡೆಸಿ ಸರ್ಕಾರವನ್ನು ಉರುಳಿಸಿ ತನ್ನದೇ ಸರ್ಕಾರ ರಚಿಸಿತು. ಆಂತರಿಕ 'ಭಿನ್ನಮತೀಯ' ರಿಗೆ ಈ ಸರ್ಕಾರವೇ ಬಲಿಯಾಯಿತು. ನಂತರ ರಾಷ್ಟ್ರಪತಿ ಆಳ್ವಿಕೆ.

ಈ ನಡುವೆ ಕೇರಳರಾಜ್ಯ ಉದಯವಾದ ನಂತರ ನಡೆದ ಮೊದಲ ಚುನಾವಣೆಗಳಲ್ಲಿ 1957ರ ಮೊದಲು ಕಮ್ಯುನಿಸ್ಟ್ ಪಕ್ಷದ ಜೊತೆಗಿದ್ದ ಪ್ರತಿಯೊಂದು ಎಡ ಪಕ್ಷವೂ ದೂರ ಸರಿದರೂ, ಕಾಂಗ್ರೆಸ್‌ನ ವಿಷಪೂರಿತ ಅಪಪ್ರಚಾರದಲ್ಲಿ ಕೂಡಿಕೊಂಡರೂ ಕೇರಳದ ಜನತೆ ಯಾವುದನ್ನೂ ಲೆಕ್ಕಿಸದೆ ಕಮ್ಯುನಿಸ್ಟ್ ಪಕ್ಷಕ್ಕೆ ಮತ್ತು ಬೆಂಬಲಿತ ಪಕ್ಷೇತರರಿಗೆ ಬಹುಮತ ನೀಡಿತು. 126ರಲ್ಲಿ 45 ಸ್ಥಾನಗಳು ಹಾಗೂ 40% ಮತಗಳು ಲಭಿಸಿದವು. ನಿರ್ವಾಹವಿಲ್ಲದೆ ಕೇಂದ್ರ ಸರಕಾರ ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿ ಮಂಡಲ ರಚನೆಗೆ ಒಪ್ಪಬೇಕಾಯಿತು.

ದೇಶದಲ್ಲೆಲ್ಲಾ ಶೀಘ್ರವಾಗಿ ಜನಪ್ರಿಯತೆ ಕಳೆದುಕೊಳ್ಳುತ್ತಿದ್ದ ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವಾಗ ಕೇರಳದಲ್ಲಿ ಕಾಂಗ್ರೆಸ್‌ನ ವಿಷಪೂರಿತ ಅಪಪ್ರಚಾರಗಳನ್ನು ಸುಳ್ಳಾಗಿಸಿದ ಕಮ್ಯುನಿಸ್ಟ್ ಮಂತ್ರಿಮಂಡಲದ ಕಾರ್ಯವೈಖರಿ ದೇಶದಲ್ಲೆಲ್ಲಾ ಪ್ರಭಾವ ಬೀರಲಾರಂಭಿಸಿತು. ಕಾಂಗ್ರೆಸ್‌ನ ಕೇಂದ್ರ ಹಾಗೂ ರಾಜ್ಯ ಮುಖಂಡತ್ವಕ್ಕೆ ಮಾತ್ರವಲ್ಲ ಪಿ ಎಸ್ ಪಿ.,ಮುಸ್ಲಿಂ ಲೀಗ್ ಹಾಗೂ ಇತರ ಚಿಕ್ಕ ಪುಟ್ಟ ಪಕ್ಷಗಳಿಗೂ ಇದು ಅಸಹನೀಯವಾಗಿತ್ತು. ಕಮ್ಯುನಿಸ್ಟ್ ಸರಕಾರದ ಹೊಸ ಪೋಲೀಸ್ ನೀತಿ, ಸರಕಾರೀ ಆಡಳಿತ ಯಂತ್ರದ ಬಗ್ಗೆ ಭಿನ್ನ ನಿಲುವು, ಜನಪರವಾದ ಶಿಕ್ಷಣ ನೀತಿ, ಭೂಸುಧಾರಣಾ ಮಸೂದೆ ರಾಜ್ಯದ ಪಟ್ಟಭದ್ರ ಹಿತಾಸಕ್ತಿಗಳಲ್ಲಿ ನಡುಕ ಹುಟ್ಟಿಸಲಾರಂಭಿಸಿತು. ಪಕ್ಷಾಂತರ, ಅಥವಾ ಬೇರಾವುದೇ "ಸಂವೈಧಾನಿಕ ಪ್ರಯತ್ನ ನಿರುಪಯೋಗಿ ಎಂದು ಖಾತ್ರಿಯಾದಾಗ "ವಿಮೋಚನಾ ಸುಮರ"ದ ಹೆಸರಿನಲ್ಲಿ ಕಾಂಗ್ರೆಸ್‌ನ ನೇತೃತ್ವದಲ್ಲಿ ಹಿಂಸಾತ್ಮಕ ಅಪಪ್ರಚಾರ ಆರಂಭವಾಯಿತು.ಪಟ್ಟಭದ್ರ ಹಿತಾಸಕ್ತಿಗಳೆಲ್ಲಾ ತಮ್ಮದೇ ಆದ ಕಾರಣಗಳಿಗಾಗಿ ಇದರಲ್ಲಿ ಸೇರಿಕೊಂಡವು. ಕೊನೆಗೆ 28 ತಿಂಗಳ ಸರಕಾರವನ್ನು ಕೇಂದ್ರಸರಕಾರ ತನ್ನದೇ ಪಕ್ಷ ಉಂಟು ಮಾಡಿದ "ಆಡಳಿತದ ನಿಷ್ಕ್ರಿಯತೆ" ಯನ್ನು ನೆಪವೊಡ್ಡಿ ವಜಾ ಮಾಡಿತು.

ಕಾಂಗ್ರೆಸ್‌ಗೆ ತಾತ್ಕಾಲಿಕ"ವಿಜಯ" ಕೊಟ್ಟ ಈ ಪ್ರಜಾಪ್ರಭುತ್ವ-ವಿರೋಧಿ ಕರಾಳಕೃತ್ಯ ಕೊನೆಗೆ ಅದಕ್ಕೇ ಮುಳುವಾಯಿತು. ಕಾಂಗ್ರೆಸ್ ನೀತಿಯ ನಿರಂತರ ಬಿಕ್ಕಟ್ಟಿಗೆ ನಾಂದಿ ಹಾಕಿ ಅಂತಿಮವಾಗಿ ಅದನ್ನು ಜನರಿಂದ ದೂರ ಮಾಡಿ ಕೇರಳ ಶಾಶ್ವತವಾಗಿ ಅದರ ಕೈ ತಪ್ಪಿಹೋಗುವಂತೆ ಮಾಡಿದ ಘಟನೆಯಿದು.

ಈ "ಕಮ್ಯುನಿಸ್ಟ್-ವಿರೋಧಿ ರಂಗ" ವಿಭಿನ್ನ ಹಾಗೂ ಹಲವು ಅಂಶಗಳಲ್ಲಿ ಪರಸ್ಪರ ವಿರೋಧಿಯಾದ ರಾಜಕೀಯ, ಸಾಮಾಜಿಕ-ಆರ್ಥಿಕ ಮತೀಯ ಶಕ್ತಿಗಳ ಕಲಸುಮೇಲೊಗರ. ಇದನ್ನು "ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ಮಹತ್ಸಾಧನೆ" ಎಂದೆಲ್ಲಾ ಡಂಗುರ ಸಾರಲಾಯಿತು 1960 ನಡೆದ ಮಧ್ಯಾವಧಿ ಚುನಾವಣೆ ಇದರ ಟೊಳ್ಳುತನವನ್ನು ಬಯಲಿಗೆಳೆಯಿತು. ಕಮ್ಯುನಿಸ್ಟ್ ಪಕ್ಷ ಗೆದ್ದ ಸ್ಥಾನಗಳ ಸಂಖ್ಯೆ ಕಡಿಮೆಯಾದರೂ ಪಡೆದ ಮತಗಳ ಪ್ರಮಾಣ 40% ದಿಂದ 44% ಕ್ಕೇರಿತು.

ಫೆಬ್ರವರಿ 1960ರಲ್ಲಿ ಪಿ.ಎಸ್.ಪಿ. ನೇತೃತ್ವದ ಪಿ.ಎಸ್.ಪಿ.-ಕಾಂಗ್ರೆಸ್ ಮಂತ್ರಿ ಮಂಡಲ ಮತ್ತೆ ಅಧಿಕಾರಕ್ಕೇನೋ ಬಂತು.ಮತೀಯ ಬಣ್ಣ ಕಾಣದಿರಲೆಂದು ಮುಸ್ಲಿಂ ಲೀಗ್‌ನ್ನು ಅಧಿಕೃತವಾಗಿ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳದೆ ಸಭಾಧ್ಯಕ್ಷರ ಸ್ಥಾನ ಅದಕ್ಕೆ ಬಿಟ್ಟುಕೊಡಲಾಯಿತು. ಯಥಾಪ್ರಕಾರ ಮತ್ತೆ ಬಿಕ್ಕಟ್ಟು. ಒಂದು ಬಿಕ್ಕಟ್ಟಿನ ಪರಿಹಾರದೊಂದಿಗೆ ಇನ್ನೊಂದು ಹೊಸ ಬಿಕ್ಕಟ್ಟು. ಪರಿಣಾಮವಾಗಿ ನವಂಬರ್ 1961ರಲ್ಲಿ ಮುಸ್ಲಿಂ ಲೀಗನ್ನು ಹೊರಗೆಸೆಯಲಾಯಿತು. ಅಕ್ಟೋಬರ್ 1962ರಲ್ಲಿ ಪಿ.ಪಿ.ಎಸ್. ಮಸರದಿ.1964ರಲ್ಲಿ ಸ್ವತಃ ಕಾಂಗ್ರೆಸಿನದೇ ಒಂದು ವಿಭಾಗಹೊರಗೆಸೆಯಲ್ಪಟ್ಟಿತು. 1957-59ರ ಮಹತ್ಸಾಧನೆಯ ಕಮ್ಯುನಿಸ್ಟ್ ವಿರೋಧಿರಂಗ ಐದೇ ವರ್ಷಗಳೊಳಗೆ ತಾನಾಗಿಯೇ ಮಣ್ಣು ಮುಕ್ಕಿತು.

ಆದರೂ ಆಸೆಬಿಡದ ಕಾಂಗ್ರೆಸ್ ಅದೇ ತಾನೇ ಕಮ್ಯುನಿಸ್ಟ್ ಆಂದೋಲನದಲ್ಲಿ ಉಂಟಾಗಿದ್ದ ಒಡಕಿನ ಲಾಭಪಡೆಯಲು ಪ್ರಯತ್ನಿಸಿತು. ಸಿ.ಪಿ.ಐ. ಕೂಡಾ ಶಕ್ತಿಮೀರಿ ನೆರವು ನೀಡಿತು. ಫಲವೇನಾಯಿತು? 1965 ರಲ್ಲಿ ನಡೆದ ಚುನಾವಣೆಗಳಲ್ಲಿ ಸಿ.ಪಿ ಐ.[ಎಂ] 40 ಸೀಟುಗಳನ್ನು ಪಡೆದು ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೆ, ಕಾಂಗ್ರೆಸ್‌ಗೆ 36 ಸ್ಥಾನಗಳು, ಸಿ.ಪಿ.ಐ ಗೆ 3. 1957-59ರ ಕಮ್ಯುನಿಸ್ಟ್ ವಿರೋಧಿ ರಂಗದ ಪ್ರಭಾವಕ್ಕೆ ಬಲಿಯಾಗಿದ್ದ ವಿವಿಧ ವಿಭಾಗಗಳಲ್ಲಿ ಕಾಂಗ್ರೆಸ್ ಬಗ್ಗೆ ಉಂಟಾಗಿದ್ದ ಭ್ರಮನಿರಸನದ ಪ್ರತೀಕವಾಗಿತ್ತದು. ಯಾರಿಗೂ ಪೂರ್ಣ ಬಹುಮತ ದೊರೆಯಲಿಲ್ಲ.

ಇದು ಕೇರಳದ ರಾಜಕೀಯದ ಒಂದು ಪ್ರಮುಖ ಘಟ್ಟ ಕೂಡಾ. ಕಾಂಗ್ರೆಸ್‌ಗೆ ಸರಕಾರ ರಚಿಸುವ ಸಾಮರ್ಥ್ಯವಿಲ್ಲ. ಕಾಂಗ್ರೆಸ್‌ನ್ನು ವಿರೋಧಿಸುವ ಪಕ್ಷಗಳು ಸಂಯುಕ್ತರಂಗ ರಚಿಸಿಕೊಳ್ಳದಿದ್ದರೆ ಕೇರಳಕ್ಕೆ ಚುನಾಯಿತ ಮಂತ್ರಿಮಂಡಲ ಸಿಗುವಂತಿಲ್ಲ. ಪ್ರತಿಯೊಂದು ಕಾಂಗ್ರೆಸ್ಸೇತರ ಪಕ್ಷವನ್ನು ಪುನರಾಲೋಚನೆಗೀಡು ಮಾಡಿದ ಪ್ರಶ್ನೆಯಿದು. ಈ ಸನ್ನಿವೇಶದಲ್ಲಿ ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಕಾಂಗ್ರೆಸನ್ನು ಸೋಲಿಸಲು ಒಪ್ಪುವ ಪಕ್ಷಗಳ ಐಕ್ಯತೆಗೆ ಸಿ.ಪಿ.ಐ.[ಎಂ] ರಾಜ್ಯ ಸಮಿತಿ ಕರೆ ನೀಡಿತು. ಇತರ ರಾಜ್ಯಗಳಲ್ಲಿನ ಐಕ್ಯ ಸಾಮೂಹಿಕ ಕಾರ್ಯಾಚರಣೆಗಳು ಇದಕ್ಕೆ ಇನ್ನಷ್ಟು ಬಲನೀಡಿತು. ಏಳು ಪಕ್ಷಗಳ ಸಂಯುಕ್ತರಂಗ ಅಸ್ತಿತ್ವಕ್ಕೆ ಬಂತು. 1967ರಲ್ಲಿ ನಡೆದ ನಾಲ್ಕನೇ ಸಾರ್ವತ್ರಿಕ ಚುನಾವಣೆಗಳಲ್ಲಿ ಈ ರಂಗ 133 ರಲ್ಲಿ115ಸ್ಥಾನಗಳನ್ನು ಪಡೆದು ಭಾರೀ ಜಯಗಳಿಸಿತು. ಕಾಂಗ್ರೆಸ್‌ಗೆ ದಕ್ಕಿದ್ದು ಕೇವಲ 9ಸೀಟುಗಳು. ಅದರ ಮಿತ್ರ ಕೇರಳ ಕಾಂಗ್ರೆಸ್‌ಗೆ6. ಸಿ.ಪಿ.ಐ [ಎಂ] ನೇತೃತ್ವದ ಸಂಯುಕ್ತರಂಗ ಅಧಿಕಾರ ವಹಿಸಿಕೊಂಡಿತು.

1967ರ ಈ ಸಂಯುಕ್ತರಂಗ ಗಾತ್ರದಲ್ಲಿ ದೊಡ್ಡದಾಗಿದ್ದರೂ ಗುಣಮಟ್ಟದಲ್ಲಿ ದುರ್ಬಲವಾಗಿತ್ತು. ಕೆಲವೇ ತಿಂಗಳಲ್ಲಿ ಸಿ.ಪಿ.ಐ. ಹಾಗೂ ಆರ್. ಎಸ್. ಪಿ. ಅಪಸ್ವರ ಎತ್ತಲಾರಂಭಿಸಿದವು. ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್‌ನ ಇಬ್ಭಾಗ,ಎಡ ಮುಖವಾಡದ ಹಿಂದೆ ತನ್ನ ಪ್ರಾಬಲ್ಯ ಸ್ಥಾಪಿಸುವಲ್ಲಿ ಹಾಗೂ ದೇಶದ ಎಡ ಆಂದೋಲನವನ್ನು ದಿಕ್ಕುಗೆಡಿಸುವಲ್ಲಿ ಇಂದಿರಾ ಗಾಂಧಿಯವರ ಸಫಲತೆಯ ಹಿನ್ನೆಲೆಯಲ್ಲಿ ಸಿ.ಪಿ.ಐ. ನೇತೃತ್ವದಲ್ಲಿ 'ಮಿನಿ ರಂಗ' ಹುಟ್ಟಿಕೊಂಡಿತು. "ಸರಕಾರದಲ್ಲಿರಿ ಇಲ್ಲವೇ ಜನರೊಡನೆ ಸೇರಿಕೊಂಡು ಚಳುವಳಿ ಮಾಡಬೇಕೆಂದಿದ್ದರೆ ಸರಕಾರ ಬಿಡಿ"ಎಂದು ಸಿ.ಪಿ.ಐ [ಎಂ] ಗೆ ಉಪದೇಶ ನೀಡಲಾಯಿತು. ಕಾರ್ಮಿಕ ವರ್ಗದ ಪಕ್ಷವಾಗಿ ಜನತೆಯ ಸಮರಶೀಲ ಹೋರಾಟಗಳಿಂದ ದೂರವಾಗಲು ಸಿ. ಪಿ. ಐ. [ಎಂ] ನಿರಾಕರಿಸಿತು. ಅಕ್ಟೋಬರ್ 1969ರಲ್ಲಿ ಸಂಯುಕ್ತರಂಗ ಸರಕಾರ ರಾಜಿನಾಮೆ ನೀಡಬೇಕಾಯಿತು. ಇಲ್ಲಿಂದ ಮುಂದಿನ ಒಂದು ದಶಕದ ಕಾಲ ಕೇರಳ ಕಮ್ಯುನಿಸ್ಟ್-ವಿರೋಧಿರಂಗದ ಎರಡನೇ ಆವೃತ್ತಿಯನ್ನು ಕಂಡಿತು. ಈ ಬಾರಿಯ ಒಂದು ಪ್ರಮುಖ ವ್ಯತ್ಯಾಸವೆಂದರೆ ಇದು ಹಿಂದಿನಂತೆ ಪೂರ್ಣವಾಗಿ ಬಲಪಂಥೀಯ ರಂಗವಾಗಿರಲಿಲ್ಲ. ಸಿ.ಪಿ.ಐ.[ಎಂ]ಇದನ್ನೂ ಎದುರಿಸಿ ಜನತೆಯ ಹಲವಾರು ಸಮರಶೀಲ ಹೋರಾಟಗಳಿಗೆ ನೇತೃತ್ವ ನೀಡಿತು.

1969ರಲ್ಲಿ ಕಾಂಗ್ರೆಸ್ ಬೆಂಬಲಿತ ಸಿ.ಪಿ.ಐ. ನೇತೃತ್ವದ ಸರಕಾರ, ನಂತರ ಕಾಂಗ್ರೆಸ್ ಕೂಡಾ ಪಾಲುಗೊಂಡಿದ್ದ ಸರಕಾರ ಕ್ರೂರದಮನಕ್ಕೆ ಕುಪ್ರಸಿದ್ಧ ಸರಕಾರಗಳೆಂದು ದಾಖಲಾದವು. ಈಗಿನ ಮುಖ್ಯಮಂತ್ರಿಗಳು ಗೃಹಮಂತ್ರಿಯಾಗಿದ್ದು ರಾಜಿನಾಮೆ ನೀಡಬೇಕಾಗಿ ಬಂದ ರಾಜನ್ ಮೊಕದ್ದಮೆಯ ಹೆಸರು ಯಾರು ಕೇಳಿಲ್ಲ?

1977ರಲ್ಲಿ ದೇಶದಲ್ಲೆಲ್ಲಾ "ಜನತಾ ಅಲೆ" ಯಿದ್ದಾಗ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂತು. ಒಂದೇ ವರ್ಷದೊಳಗೆ ಅಲುಗಾಡಲೂ ಆರಂಭಿಸಿತು. ಮತ್ತೆ ಬಿಕ್ಕಟ್ಟುಗಳ ಸಾಲು. ಕಾಂಗ್ರೆಸ್‌ನೊಳಗಿಂದ ಕಾಂಗ್ರೆಸ್(ಎಸ್) ಜನ್ಮ. ಭಟಿಂಡಾ ಅಧಿವೇಶನದಲ್ಲಿ ಸಿ.ಪಿ.ಐ.ನ ತೀವ್ರ ಪರಿಶೀಲನೆ. ಈಹಿನ್ನೆಲೆಯಲ್ಲಿ 1979 ರ ಉತ್ತರಾರ್ಧದಲ್ಲಿ 3ಎಡ ಪಕ್ಷಗಳು ಹಾಗೂ 4ಇತರ ಪ್ರಜಾಪ್ರಭುತ್ವ ಪಕ್ಷಗಳ ಎಡ-ಪ್ರಜಾಪ್ರಭುತ್ವ ರಂಗ [ಎಲ್.ಡಿ.ಎಫ್.] ಸಾಮೂಹಿಕ ಐಕ್ಯ ಕಾರ್ಯಾಚರಣೆಗಳ ಮೂಲಕ ಅಸ್ತಿತ್ವಕ್ಕೆ ಬಂತು. 1980ರ ಚುನಾವಣೆಗಳಲ್ಲಿ ದೇಶದಲ್ಲೆಲ್ಲಾ "ಇಂದಿರಾ ಅಲೆ" ಅಪ್ಪಳಿಸುತ್ತಿದ್ದಾಗ ಕಾಂಗ್ರೆಸ್ ರಂಗ ಪರಾಭವ ಹೊಂದಿ ಎಲ್.ಡಿ.ಎಫ್.ಗೆ 93 ಸ್ಥಾನಗಳು ದೊರೆತವು. ಸಿ ಪಿ.ಐ. [ಎಂ] 35ಸ್ಥಾನ ಗಳಿಸಿತು.

ಈ ಸರಕಾರ 1957ರ ಸರಕಾರದ ಪರಂಪರೆಯನ್ನು ಮುಂದುವರೆಸಿ ಕೃಷಿ ಕಾರ್ಮಿಕರ, ನಿರುದ್ಯೋಗಿ ಯುವಕರ ಕಲ್ಯಾಣಕ್ಕಾಗಿ ಮಹತ್ವದ ಕ್ರಮಗಳನ್ನು ಜ್ಯಾರಿ ಮಾಡಲಾರಂಭಿಸಿದಂತೆ ಪಟ್ಟಭದ್ರ ಹಿತಾಸಕ್ತಿಗಳು ಮತ್ತೆ ಸಕ್ರಿಯಗೊಂಡು ಕಾಂಗ್ರೆಸ್[ಎಸ್] ಹಾಗೂ ಕೇರಳ ಕಾಂಗ್ರೆಸ್(ಎಂ)ನ್ನು ಎಲ್.ಡಿ.ಎಫ್.ನಿಂದ ಹೊರಗೆಳೆಯುವಲ್ಲಿ ಯಶಸ್ವಿಯಾದರು. 1982ರಲ್ಲಿ ಎಲ್.ಡಿ.ಎಫ್. ಸರಕಾರ ರಾಜಿನಾಮೆ ನೀಡಿತು. ಕಾಂಗ್ರೆಸ್‌ನ ಅಲ್ಪಾಯುಷಿ [ಸ್ಪೀಕರ್‌ನ ಓಟನ್ನು ಅವಲಂಬಿಸಿದ್ದ] ಸರಕಾರ ಬಂದು ಉರುಳಿತು. ನಂತರ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಸರಕಾರ ಅಲ್ಪ ಬಹುಮತದಿಂದ ಅಧಿಕಾರ ಪಡೆಯಿತು. ಅದು ಪಡೆದ ಮತಗಳು 55% ರಿಂದ 48.27%ಕ್ಕಿಳಿದರೆ, ಎಲ್.ಡಿ.ಎಫ್.ಗೆ 47.28%ಮತ ದೊರಕಿತು.

ಈ ರೀತಿ 1982ರಲ್ಲೂ ಕಾಂಗ್ರೆಸ್‌ನ "ಯಶಸ್ಸು" ವಾಸ್ತವವಾಗಿ ಕಾಂಗ್ರೆಸ್(ಐ)ನ ರಾಜಕೀಯ ಸೋಲಿನ ದ್ಯೋತಕ. ಯಾಕೆಂದರೆ ರಾಜ್ಯದ ಎಲ್ಲಾ ಕೋಮುವಾದಿ, ಜಾತೀವಾದಿ ಪಕ್ಷಗಳ ಬೆಂಬಲವಿಲ್ಲದಿದ್ದರೆ ಆಧುನಿಕ ಜಾತ್ಯತೀತ ಪಕ್ಷವೆಂದು ಹೇಳಿಕೊಳ್ಳುವ ಕಾಂಗ್ರೆಸ್[ಐ]ನ ಪರಿಸ್ಥಿತಿ 1967 ಕ್ಕಿಂತಲೂ ಹೀನಾಯವಾಗಿರುತ್ತಿತ್ತು.

ಕೇರಳ ಚುನಾವಣೆಯಲ್ಲಿ ಸ್ಪರ್ಧಿಗಳ ಸಂಖ್ಯೆ

ಎಡಪ್ರಜಾಸತ್ತಾತ್ಮಕ ರಂಗ	ಸ್ಪರ್ಧಿಸಿದ ಸ್ಥಾನಗಳು 1982 ರಲ್ಲಿ	ಗೆದ್ದ ಸ್ಥಾನಗಳು	ಈಗ ಸ್ಪರ್ಧಿಸುತ್ತಿರು ಸ್ಥಾನಗಳು (1987)
ಸಿ.ಪಿ.ಐ. (ಎಂ)	51	26	70
ಸಿ.ಪಿ.ಐ.	25	13	26
ಆರ್.ಎಸ್.ಪಿ.	8	4	7
ಜನತಾ ಪಕ್ಷ	12	4	12
ಕಾಂಗ್ರೆಸ್ (ಎಸ್)	18	7	14
ಅಖಿಲ ಭಾರತ ಮುಸ್ಲಿಂ ಲೀಗ್	12	4	
ಕೇರಳ ಕಾಂಗ್ರೆಸ್ (ಸೋಸಲೀಸ್ಟ್)	1	1	
ಲೋಕದಳ			2
ಸಿ ಪಿ.ಐ.(ಎಂ) ಬೆಂಬಲಿತ			9

ಕೇರಳ : ಗೆಲುವಿನತ್ತ ಎಡ - ಪ್ರಜಾಪ್ರಭುತ್ವ ರಂಗದ ಹೆಜ್ಜೆ

ಕೇರಳದಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆ ದೇಶಾದ್ಯಂತ ಕುತೂಹಲ ಕೆರಳಿಸಿದೆ. ಮಾರ್ಚ್ 23ರಂದು ಚುನಾವಣೆ ನಡೆಯುವುದೆಂದು ಘೋಷಿಸಲ್ಪಟ್ಟ ಕ್ಷಣದಿಂದಲೇ ಕೇರಳದ ರಾಜಕೀಯ ವಲಯದಲ್ಲಿ ಬಿರುಸಿನ ಚಟುವಟಿಕೆಗಳು ಪ್ರಾರಂಭಗೊಂಡಿದೆ. ಆಡಳಿತ ನಡೆಸುತ್ತಿರುವ ಕಾಂಗ್ರೆಸ್‌ನ ಕೋಮುವಾದೀ ಸಂಯುಕ್ತ ರಂಗದೊಳಗೆ ಪರಸ್ಪರ ಹೊಡೆದಾಟ ಶುರುವಾಗಿದೆ. ಸೀಟುಗಳ ಹಂಚಿಕೆಯಲ್ಲಿ ತೀವ್ರವಾದ ಬಿಕ್ಕಟ್ಟು ತಲೆದೋರಿದೆ. ಆಡಳಿತ ರಂಗದ ಪ್ರಮುಖ ಅಂಗ ಪಕ್ಷವಾದ ಕೇರಳ ಕಾಂಗ್ರೆಸ್ ಇಬ್ಭಾಗವಾಗಿದೆ. ಕೇರಳ ಕಾಂಗ್ರೆಸ್‌ನ ಜೋಸೆಫ ಮಣಿ ಗುಂಪುಗಳು ಸಂಧರ್ಭಸಾಧಕ ನೀತಿಯನ್ನನುಸರಿಸಿ ಲೆಕ್ಕವಿಲ್ಲದಷ್ಟು ಬಾರಿ ಒಂದಾಗುವ ಎರಡಾಗುವ ಆಟಗಳನ್ನು ಆಡುತ್ತಿವೆ. ಆಡಳಿತ ರಂಗದ ಉಳಿದ ಪಕ್ಷಗಳಲ್ಲೂ ಬಿಕ್ಕಟ್ಟು ಉಂಟಾಗಿದೆ. ಬೇಕಾದಷ್ಟು ಜನ ಬಂಡಾಯ ಅಭ್ಯರ್ಥಿಗಳು ಈ ಪಕ್ಷಗಳಿಂದ ಸ್ಪರ್ಧಿಸಿದ್ದಾರೆ.

ಆದರೆ ಸಿ.ಪಿ.ಐ. (ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಅತ್ಯಂತ ಒಗ್ಗಟ್ಟಿನಿಂದ ಚುನಾವಣಾ ಸಿದ್ಧತೆಯಲ್ಲಿ ತೊಡಗಿದೆ. ಸೀಟುಗಳ ಹಂಚಿಕೆಯಲ್ಲಿ ಯಾವುದೇ ಭಿನ್ನಾಭಿಪ್ರಾಯ ಉಂಟಾಗಿಲ್ಲ. ಈ ಹೊಂದಾಣಿಕೆಯ ಪ್ರಕಾರ ಒಟ್ಟು 140 ಸ್ಥಾನಗಳ ಪೈಕಿ ಸಿ.ಪಿ.ಐ. (ಎಂ) ಮತ್ತು ಅದರ ಬೆಂಬಲಿತ ಅಭ್ಯರ್ಥಿಗಳು 79 ಸ್ಥಾನಗಳಲ್ಲಿ ಸ್ಪರ್ಧಿಸಿದ್ದಾರೆ. ಸಿ.ಪಿ.ಐ. 26 ಸ್ಥಾನಗಳಿಗೂ, ಆರ್.ಎಸ್.ಪಿ. 7 ರಲ್ಲೂ, ಕಾಂಗ್ರೆಸ್ (ಎಸ್) 14 ಸ್ಥಾನಗಳಿಗೂ ಲೋಕದಳ 2 ಸ್ಥಾನಗಳಿಗೂ ಸ್ಪರ್ಧಿಸುತ್ತಿದೆ. ಕಳೆದ ಬಾರಿ ಸಿ.ಪಿ.ಐ [ಎಂ] 60 ಸ್ಥಾನಗಳಿಗೆ ಸ್ಪರ್ಧಿಸಿತ್ತು, ಸಿ.ಪಿ.ಐ [ಎಂ] ನ ಈ ಬಾರಿಯ ಅಭ್ಯರ್ಥಿಗಳಲ್ಲಿ 25 ಮಂದಿ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಮುಖಂಡರುಗಳಿದ್ದಾರೆ. ಡಿ.ವೈ ಎಫ್. ಐ ನ ಅಖಿಲ ಭಾರತ ಅಧ್ಯಕ್ಷ ಕಾಂ. ಎಂ. ವಿಜಯಕುಮಾರ್, ಕೇರಳ ರಾಜ್ಯ ಅಧ್ಯಕ್ಷ ಕಾ. ಎಸ್. ಶರ್ಮಾ, ರಾಜ್ಯ ಕಾರ್ಯದರ್ಶಿ ಕಾ. ಎಂ. ದಾಸನ್ ಮುಂತಾದವರು ಕಣದಲ್ಲಿದ್ದಾರೆ

ವಿಧಾನ ಸಭೆಯ ಹಾಲಿ ಸದಸ್ಯರಲ್ಲಿ ಕಾ. ಇ.ಕೆ. ನಾಯನಾರ್ ಕಾ. ಕೆ. ಆರ್. ಗೌರಿ ಅವರನ್ನೊಳಗೊಂಡ 15 ಮಂದಿ ಸ್ಪರ್ಧೆಯಲ್ಲಿದ್ದಾರೆ. ಸಿ.ಪಿ.ಐ. (ಎಂ.)ಪ್ರಕಟಿಸಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ 8ಮಂದಿ ಮಹಿಳೆಯರಿದ್ದಾರೆ. ಇವರಲ್ಲಿ ಕಾ. ಕೆ.ಆರ್. ಗೌರಿ ಮಹಿಳಾ ಸಂಘಟನೆಯ ಕಾರ್ಯದರ್ಶಿ ಕಾ.ಟಿ.ದೇವಿ, ಪ್ರೊಫೆಸರ್ ಕಾ.ನಬೀಸಾ ಉಮ್ಮಲ್ ಮುಂತಾದವರಿದ್ದಾರೆ.

ಮಾಜೀ ಮುಖ್ಯಮಂತ್ರಿ ಕಾ.ಇ.ಕೆ. ನಾಯನಾರ್ ತ್ರಿಕರಿಪುರ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ಆಡಳಿತ ನಡೆಸುತ್ತಿರುವ ಸಂಯುಕ್ತ ರಂಗದೊಳಗೆ ಕಾಂಗ್ರೆ ಮತ್ತು ಇತರ ಅಂಗ ಪಕ್ಷಗಳ ನಡುವೆ ತೀವ್ರ ಕಾದಾಟ ನಡೆಯುತ್ತಿವೆ. ಕಾಂಗ್ರೆಸಿಂದ ಸೀಟು ದೊರೆಯಲಿಲ್ಲವೆಂದು ಪ್ರಸ್ತುತ ಹಣಕಾಸು ಮಂತ್ರಿಯಾಗಿರುವ ಪ್ರಭಾಕರನ್ ಮಂತ್ರಿಮಂಡಲಕ್ಕೆ ರಾಜಿನಾಮೆ ನೀಡಿದ್ದಾರೆ. ಇದೇ ರೀತಿ ಸಾರಿಗೆ ಮಂತ್ರಿ ಪಿ.ಕೆ. ವೇಲಾಯುಧನ್ ಅವರಿಗೂ ಟಿಕೆಟ್ ನಿರಾಕರಿಸಲಾಗಿದೆ. ಆಡಳಿತ ರಂಗದ ಅಂಗ ಪಕ್ಷವಾದ ಮುಸ್ಲಿಂ ಲೀಗ್‌ನ ಅಭ್ಯರ್ಥಿಗಳ ಪಟ್ಟಿಯಲ್ಲಿ ಉಪ ಮುಖ್ಯಮಂತ್ರಿ ಕೆ. ಅವುಕಾದರ್ ಕುಟ್ಟಿ ನಾಗರೀಕ ಸರಬರಾಜು ಸಚಿವ ಯು.ಎ. ಬೀರಾನ್ ಅವರುಗಳ ಹೆಸರಿಲ್ಲ ಟಿಕೆಟ್ ಸಿಗದವರೆಲ್ಲಾ ಈಗ ಸಿಟ್ಟಿನಿಂದ ಕುದಿಯುತ್ತಿದ್ದಾರೆ. ಎಸ್.ಆರ್.ಪಿ. ಪಕ್ಷ ತನಗೆ ಇನ್ನೂ ಒಂದು ಸ್ಥಾನ ಕೊಡಬೇಕೆಂದು ಹಠ ಹಿಡಿದಿದೆ. ಅಂತೂ ಆಡಳಿತ ರಂಗ ಈಗ ಮುಷ್ಠಿಯುದ್ಧದ ಕಣವಾಗಿ ಮಾರ್ಪಟ್ಟಿದೆ.

ಆಡಳಿತ ರಂಗದ ಅನೈಕ್ಯತೆ, ಬಲಹೀನತೆಗಳನ್ನು ಎಡ ಪ್ರಜಾಸತ್ತಾತ್ಮಕ ರಂಗ ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ಗೆಲುವಿನ ಹುಮ್ಮಸ್ಸಿನಿಂದ ಮುನ್ನಡೆದಿದೆ.

ರಾಜಕೀಯ ವಿಶ್ಲೇಷಕರು ಕೇರಳದ ಫಲಿತಾಂಶದ ಬಗ್ಗೆ ಮಾತ್ರ ಯಾವುದೇ ತೀರ್ಮಾನಗಳನ್ನು ಕೈಗೊಳ್ಳುವುದು ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ಹೊಂದಿದ್ದರೂ ಕೂಡ ಇಂಟೆಲಿಜೆನ್ಸ್ ವಿಭಾಗದ ಅಧ್ಯಯನವು ಎಡ ಪ್ರಜಾಸತ್ತಾತ್ಮಕ ರಂಗವು 140 ಸ್ಥಾನಗಳ ಪೈಕಿ 90ಸ್ಥಾನಗಳನ್ನು ಗೆಲ್ಲಬಹುದೆಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಕಾರ್ಯಕರ್ತರಂತೂ ಮುಂದಿನ ಮಂತ್ರಿಮಂಡಲವನ್ನು ಸಿ.ಪಿ.ಐ.[ಎಂ] ರಂಗ ರಚಿಸುವುದೇ ಖಂಡಿತವೆಂಬ ಆಶಾಭಾವನೆಯೊಂದಿಗೆ ಹಗಲಿರುಳು ದುಡಿಯುತ್ತಿದ್ದಾರೆ. ನಾವೂ ಅದೇ ಆಕಾಂಕ್ಷೆಯೊಡನೆ ಫಲಿತಾಂಶಕ್ಕಾಗಿ ಎದುರು ನೋಡೋಣ.

●

ಸಂಯುಕ್ತ ಪ್ರಜಾಪ್ರಭುತ್ವ ರಂಗದ ಅಭ್ಯರ್ಥಿಗಳು

	ಸ್ಪರ್ಧಿಸಿದ ಸ್ಥಾನಗಳು 1982 ರಲ್ಲಿ	ಗೆದ್ದ ಸ್ಥಾನಗಳು		ಈಗ ಸ್ಪರ್ಧಿಸುತ್ತಿರು ಸ್ಥಾನಗಳು (1987)
ಡಿ.ಎಸ್.ಪಿ.	1	1		
ಎನ್. ಆರ್. ಎಸ್. ಪಿ.	6	2		–
ಆರ್.ಎಸ್.ಪಿ (ಎಸ್.)	4	1		–
ಎನ್.ಡಿ ಪಿ.	8	4		9
ಅಂಥೋನಿ ಕಾಂಗ್ರೆಸ್	28	15		–
ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್	18	14		22
ಕಾಂಗ್ರೆಸ್ (ಐ)	35	20		76
ಕೇರಳ ಕಾಂಗ್ರೆಸ್ (ಜೋಸೆಫ್)	12	8		24
ಕೇರಳ ಕಾಂಗ್ರೆಸ್ (ಮಣಿ)	17	6		
ಎಸ್.ಆರ್.ಪಿ.	6	2		4
ಡಿ.ಎಲ್.ಪಿ.	1	1		1
ಜನತಾ (ಗೋಪಾಲನ್ ಗುಂಪು)	8	4	ಸಿಎಂಪಿ	2
ಪಿ.ಎಸ್.ಪಿ.	1	1	ಎಎಸ್‌ಪಿ	1

ಜನತೆಯ ಪರವಾದ ಸರ್ಕಾರ ಬರಲಿದೆ

ಎಡ ಪ್ರಜಾಪ್ರಭುತ್ವ ರಂಗಕ್ಕೆ ಮತ ನೀಡಿ ಅದನ್ನು ಅಧಿಕಾರಕ್ಕೆ ತಂದದ್ದೇ ಆದರೆ ಕೇರಳದ ಜನತೆಗೆ ಗರಿಷ್ಠ ಮಟ್ಟದಲ್ಲಿ ಸಹಾಯ ಮಾಡುವಂತಹ ಒಂದು ಸರಕಾರ ಅಸ್ತಿತ್ವಕ್ಕೆ ಬರುವುದೆಂದು ಸಿ.ಪಿ.ಐ [ಎಂ]ನ ಪ್ರ. ಕಾರ್ಯದರ್ಶಿ ಕಾ. ಇ.ಎಂ.ಎಸ್. ನಂಬೂದಿರಿಪಾಡ್ ಅವರು ಅಲೆಪ್ಪಿಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡುತ್ತ ತಿಳಿಸಿದರು. 1957, 67,80ರಲ್ಲಿ ಅಧಿಕಾರಕ್ಕೆ ಬಂದಂತಹ ಸರಕಾರ ಮಾಡಿದಂತೆ ಜನರಿಗೆ ಸಹಾಯಕವಾಗುವ ಹಲವಾರು ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸಲು ಸಾಧ್ಯವಾಗುತ್ತದೆ. ಜನರು ಒಗ್ಗಟ್ಟಾಗಿ ಶ್ರಮಿಸಿದರೆ ಎಡ ಪ್ರಜಾಪ್ರಭುತ್ವ ರಂಗಕ್ಕೆ ಒಳ್ಳೆಯ ಫಲಿತಾಂಶ ದೊರೆಯುತ್ತದೆ. ಕರುಣಾಕರನ್ ರಂಗ[UDF]ವಿರೋಧ ಪಕ್ಷವಾಗುತ್ತದೆ. ಹಿಂದೂ ರಂಗಕ್ಕೆ ಸೊನ್ನೆ ಸಿಗುತ್ತದೆ. ಈಗಾಗಲೇ ಪರಸ್ಪರ ಹೊಡೆದಾಟ ನಡೆಸಿಕೊಂಡು ರಂಪಾಟ ಮಾಡುತ್ತಿರುವ ಸಂಯುಕ್ತ ರಂಗವನ್ನು ಮತ್ತೆ ಅಧಿಕಾರಕ್ಕೆ ತಂದರೆ ಎಂತಹ ಗತಿ ಒದಗುತ್ತದೆ? 1982ರಲ್ಲಿ ನಡೆದ ಚುನಾವಣೆಯಲ್ಲಿ ಆಡಳಿತ ರಂಗದ ಪಕ್ಷಗಳು ತಂತಮ್ಮಲ್ಲೇ ಘರ್ಷಣೆಗಿಳಿದಿದ್ದವು. ಚುನಾವಣೆ ಸಮಯದಲ್ಲಿ ಆಡಳಿತ ರಂಗ ಸುಮ್ಮನಿದ್ದು ಅಧಿಕಾರಕ್ಕೆ ಬಂದ ನಂತರ ಜಗಳ ಶುರು ಮಾಡುತ್ತಾರೆ. 5ವರ್ಷ ಆಡಳಿತ ನಡೆಸಿದ ಕರುಣಾಕರನ್ ಸರಕಾರಕ್ಕೆ ಜನರಿಗಾಗಿ ಏನಾದರೂ ಒಳ್ಳೆಯದು ಮಾಡಲು ಸಾಧ್ಯವಾಗಿದೆಯೇ? ಅವರ ಮಧ್ಯೆ ಹೊಡೆದಾಟ ಇಲ್ಲದ ಸಮಯವೇ ಇಲ್ಲ. ನೆಹರು, ಇಂದಿರಾ, ಕರುಣಾಕರನ್ ಇವರೆಲ್ಲಾ ಸೇರಿ ಕಳೆದ 27ವರ್ಷದಿಂದ ಕೇರಳದಲ್ಲಿ ನಡೆಸಿದ ಜಾತೀವಾದೀ ಮತ್ತು ಪ್ರತಿಗಾಮೀ ರಂಗದ ನೇತೃತ್ವದ ಆಡಳಿತ ಮಾಡಿರುವ ಅಪಾಯ ಕಡಿಮೆಯೇನಲ್ಲ ಇದರಿಂದ ಎಲ್ಲಾ ಜಾತಿಯ ಜನಗಳೂ ಈಗ ಜಾತೀವಾದಿ ಕಾಂಗ್ರೆ ಹೊಂದಾಣಿಕೆಯ ಸರಕಾರದ ಫಲವನ್ನು ಅನುಭವಿಸುತ್ತಿದ್ದಾರೆ. ಆಡಳಿತ ರಂಗ ಮತ್ತು ಎಡ ಪ್ರಜಾಪ್ರಭುತ್ವ ರಂಗ ಜಾತಿವಾದಿಗಳನ್ನು ಬೆಳೆಸುತ್ತದೆಂದು ಅದನ್ನ ಸೋಲಿಸುವುದಕ್ಕಾಗಿ ಹಿಂದೂಗಳನ್ನು ಸಂಘಟಿಸಬೇಕು ಎಂಬುದೇ ಹಿಂದೂ ರಂಗದವರ ವಾದ ಇದು ಜಾತೀವಾದವಲ್ಲವೇ ? ಆದ್ದರಿಂದ ಹಿಂದುಗಳ ಓಟಿನ ಬ್ಯಾಂಕಾಗಿ ಸಂಘಟನೆ ಮಾಡಬೇಕೆಂದು ಕೂಡಾ ಅವರು ಹೇಳುತ್ತಾರೆ. ಹಿಂದುಗಳನ್ನು ಪ್ರತ್ಯೇಕವಾಗಿ ಸಂಘಟಿಸಿದರೆ ಅದರ ಫಲವೇನಿರುತ್ತದೆ ? ಕೇರಳದಲ್ಲಿ ಕ್ರಿಶ್ಚಿಯನ್, ಮುಸ್ಲಿಂ ಎಷ್ಟೊ ವರ್ಷಗಳಿಂದ ಇದ್ದಾರೆ. ಮಲಯಾಳಂ ಅಂತ ನಾವು ಹೇಳುವ ಭಾಷೆ ವಿದೇಶೀ ಭಾಷೆಗಳಿಂದ ರೂಪುಗೊಂಡಿದ್ದು ಆರ್ಯರಿಗೂ ಮೊದಲೇ ಇಲ್ಲಿ ಸಂಸ್ಕೃತಿ ಬೆಳೆದಿತ್ತು. ಅದೇ ರೀತಿ ಬಂದಂತಹ ಕ್ರಿಶ್ಚಿಯನ್, ಇಸ್ಲಾಂ ಮತಗಳು ಕೂಡಾ ಮಲಯಾಳಂ ಭಾಷೆಗೇ ಸಂಸ್ಕೃತಿಗೆ ತುಂಬಾ ಕೊಡುಗೆ ನೀಡಿವೆ. ಹಿಂದೂ ರಂಗದವರು ಹೇಳುವಂತೆ ಭಾರತದಲ್ಲಿ ಕೇವಲ ಹಿಂದೂಗಳು ಮಾತ್ರ ಇರಬೇಕು ಅನ್ನುವುದಾದರೆ, ಕ್ರಿಶ್ಚಿಯನ್, ಮುಸ್ಲಿಂಗಳ . ಗತಿ ಏನಾಗುತ್ತದೆ ? ಹಿಂದೂರಾಷ್ಟ್ರವಾದ ಜ್ಯಾರಿಗೊಂಡರೆ ಏನಾಗುವುದೆಂಬುದಕ್ಕೆ ಉತ್ತರ ಪ್ರದೇಶದ ರಾಮ ಜನ್ಮಭೂಮಿ ಮತ್ತು ಬಾಬರಿ ಮಸೀದಿಗಳ ನಡುವೆ ನಡೆಯುತ್ತಿರುವ ಕಲಹ ತೋರಿಸುತ್ತದೆ. ಈ ಸಂದರ್ಭದಲ್ಲಿ ಕೋಮುವಾದಕ್ಕೆದಿರು ಹೋರಾಟ ನಡೆಸದಿದ್ದರೆ ಕೇರಳವೂ ಇರುವುದಿಲ್ಲ ಇಂಡಿಯಾವೂ ಇರುವುದಿಲ್ಲ. ಇಲ್ಲಿ ಮನುಷ್ಯರಿರುತ್ತಾರೋ, ನಾಯರ್ ಇರುತ್ತಾರೋ, ನಂಬೂದಿರಿ, ಇಳವರ ಇರುತ್ತಾರೋ. ಈ ಪರಿಸ್ಥಿತಿಯನ್ನು ಬದಲಾಯಿಸಬೇಕಾದರೆ ಕೋಮುವಾದೀ ಮತ್ತು ಜಾತೀವಾದಿಗಳ ರಂಗವನ್ನು ಸೋಲಿಸಲೇಬೇಕು. ○

ಚುನಾವಣೆ ಕುರಿತು -ಇ. ಎಂ. ಎಸ್.

ಈ ಸಲದ ಕೇರಳ ಚುನಾವಣೆಯಲ್ಲಿ ಮೂರು ಸ್ಪಷ್ಟ ಗುಂಪುಗಳನ್ನು ಕಾಣಬಹುದಾಗಿದೆ. ಮುಖ್ಯಮಂತ್ರಿ ಕರುಣಾಕರನ್, ಕೆ.ಪಿ.ಸಿ.ಸಿ. ಅಧ್ಯಕ್ಷ ಪದ್ಮನಾಭನ್ ಮತ್ತು ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಎ.ಕೆ ಅಂತೋನಿಯವರ ಮುಖಂಡತ್ವದಲ್ಲಿರುವ ಆಳುವ ಸಂಯುಕ್ತರಂಗ ಒಂದನೇದ್ದು. ಜಾತ್ಯಾತೀತ, ಪ್ರಜಾಪ್ರಭುತ್ವ ಕಾರ್ಯಕ್ರಮದ ಆಧಾರದಲ್ಲಿ ರಾಷ್ಟ್ರದ ಐಕ್ಯತೆಯನ್ನು ಕಾಪಾಡುವ ಘೋಷಣೆ ಈ ಪಕ್ಷದ್ದಾಗಿದೆ. ಆದರೆ ಕಟ್ಟಾ ಜಾತೀಯ ಪಕ್ಷವಾದ ಮುಸ್ಲಿಂಲೀಗ್, ಕ್ರಿಶ್ಚನ್ನರ ಮತ್ತು ಚರ್ಚಗಳ ಬಹುಮತವಿರುವ ಕೇರಳ ಕಾಂಗ್ರೆಸ್, ಹಾಗೆಯೇ ಇತರ ಜಾತೀಯ ಪಕ್ಷಗಳಾದ ನಾಯಕರ ಎನ್.ಡಿ.ಪಿ., ಎಸ್ವಾಗಳ ಎಸ್.ಆರ್.ಪಿ. ಮೊದಲಾದ ಹಲವಾರು ಜಾತೀಯ ಪಕ್ಷಗಳು ಕಾಂಗ್ರೆ ಜೊತೆಯಲ್ಲಿ ಸೇರಿಕೊಂಡಿವೆ. ಜಾತ್ಯಾತೀತವೆಂದು ಹೇಳಿಕೊಳ್ಳುತ್ತಿರುವ ಅಧಿಕಾರಕ್ಕಾಗಿ ಹಾತೊರೆಯುತ್ತಿರುವ, ಸಂದರ್ಭಸಾಧಕ ಪಕ್ಷದ ನೇತೃತ್ವದಲ್ಲಿ ಮತೀಯ ಮತ್ತು ಜಾತೀಯ ಪಕ್ಷಗಳ ಒಂದು ಒಕ್ಕೂಟ ಇದಾಗಿದೆ. ಈ ಒಕ್ಕೂಟದ ಹಲವಾರು ಮುಖಂಡರು ಅಪ್ರತ್ಯಕ್ಷವಾಗಿ ಹಿಂದೂ ಜಾತೀವಾದಿಗಳು, ಆರ್.ಎಸ್.ಎಸ್. ಮತ್ತು ಅದರ ರಾಜಕೀಯ ವಿಭಾಗ ಬಿ.ಜೆ.ಪಿ. ಯೊಡನೆ ಸಂಬಂಧ ಉಳ್ಳವರಾಗಿದ್ದಾರೆ.

121 ಉಮೇದುವಾರರನ್ನು ಚುನಾವಣಾ ರಂಗಕ್ಕಿಳಿಸಿರುವ ಎರಡನೇ ರಂಗ ಆರ್.ಎಸ್.ಎಸ್.ಮೇಲ್ಗೈಯ ಬಿ.ಜೆ.ಪಿ ಮತ್ತು ಹಿಂದೂ ಜಾತಿವಾದಿಗಳ ಸಂಘಟನೆಯಾದ ಹಿಂದೂ ಮುನ್ನಣಿಯ ವಶದ್ದು. ಹಿಂದೂ ರಾಷ್ಟ್ರದ ಧೋರಣೆಯನ್ನು ಈ ರಂಗ ಪ್ರತಿಪಾದಿಸುತ್ತಿದೆ. ಕೇರಳದ ಜನ ಸಂಖ್ಯೆಯಲ್ಲಿ ಶೇ.40 ರಷ್ಟಿರುವ ಮುಸ್ಲಿಂ ಮತ್ತು ಕ್ರಿಶ್ಚನರನ್ನು ಹಿಂದುಗಳನ್ನಾಗಿ ಪರಿವರ್ತಿಸಬೇಕು ಅಥವಾ ಅವರನ್ನು ವಿದೇಶಿಯರನ್ನಾಗಿ ಕಾಣಬೇಕೆಂಬುದು ಅವರ ವಾದ. ಹೊರಗಿದ್ದು ಕಾಂಗ್ರೆಸ್ಸನ್ನು ವಿರೋಧಿಸುತ್ತೇವೆಂದು ಹೇಳುವ ಈ ಮುಸ್ಲಿಂ-ಕ್ರಿಶ್ಚನ್ ವಿರೋಧಿ ರಂಗದಲ್ಲಿ ಗುಪ್ತವಾಗಿಯೂ ಬಹಿರಂಗ ಹಿಂದೂ ಕಾಂಗ್ರೆಸ್ಸಿಗರೂ ಇದ್ದಾರೆ. ಇಂಥ ಜಾತೀಯ ಮತೀಯ ಹಾಗೂ ಪ್ರತ್ಯೇಕತಾವಾದಿ ರಂಗಗಳ ವಿರುದ್ಧ ಹೋರಾಡುತ್ತಿರುವುದು ಎಡ ಪ್ರಜಾಪ್ರಭುತ್ವ ರಂಗ. ಇದರಲ್ಲಿ ಸಿ.ಪಿ.ಐ.[ಎಂ].ಸಿ.ಪಿ.ಐ. ಮತ್ತು ಆರ್.ಎಸ್.ಪಿ. ಮೂರು ಎಡಪಕ್ಷಗಳು, ಮತ್ತು ಜನತಾ, ಕಾಂಗ್ರೆಸ್[ಎಸ್] ಮತ್ತು ಲೋಕದಳಗಳಿವೆ. ಕಾಂಗ್ರೆ ನೇತೃತ್ವದ ಜಾತೀಯ ಮತೀಯ ರಂಗವನ್ನಷ್ಟೇ ಅಲ್ಲ, ಬಿ.ಜೆ.ಪಿ. ಹಿಂದೂ ಮುನ್ನಣಿ ರಂಗವನ್ನು ಪೂರ್ಣ ಸೋಲಿಸಬೇಕೆಂಬುದೇ ಈ ಎಡ ಪ್ರಜಾಪ್ರಭುತ್ವ ರಂಗದ ಉದ್ದೇಶವಾಗಿದೆ. ಆಡಳಿತೆ, ಶಿಕ್ಷಣ ಮತ್ತು ಇತರ ಸಾಮಾಜಿಕ ಚಟುವಟಿಕೆಗಳಲ್ಲಿ ಮುಸ್ಲಿಂ-ಕ್ರಿಶ್ಚನ್ ಸಂಘವಾದಿಗಳ

[6ನೇ ಪುಟ ನೋಡಿ]

ರೈತರ ಸಮಸ್ಯೆಗಳಿಗಾಗಿ ಜಂಟೀ ಚಳುವಳಿ

ದೇಶಾದ್ಯಂತ ರೈತ ಸಮುದಾಯ ಎದುರಿಸುತ್ತಿರುವ, ಒಕ್ಕಲುತನದ ಹುಟ್ಟುವಳಿಗೆ ನ್ಯಾಯಬೆಲೆ, ಹಲವಾರು ರಾಜ್ಯಗಳಲ್ಲಿ ಬರಗಾಲ ಪರಿಸ್ಥಿತಿ, ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆ, ಆಹಾರ ಧಾನ್ಯಗಳ ವಿತರಣೆ, ಕರಭಾರದ ಹೆಚ್ಚಳ, ಭೂಸುಧಾರಣೆಯ ಪ್ರಶ್ನೆ, ರೈತರ ಭೂಮಿ ಹಕ್ಕಿನ ಕಾಗದ ಪತ್ರ ಪೂರ್ಣಗೊಳಿಸುವುದು ಮುಂತಾದ ಸಮಸ್ಯೆಗಳ ಕುರಿತು ಜಂಟೀ ಚಳುವಳಿ ನಡೆಸಬೇಕೆಂದು ಅಖಿಲ ಭಾರತ ಕಿಸಾನ ಸಭಾ ಮತ್ತು ಸಿ.ಪಿ.ಐ. ಮುಖಂಡತ್ವದ ಕಿಸಾನ ಸಭೆ ನಿರ್ಣಯ ಕೈಗೊಂಡಿದೆ.

ಫೆಬ್ರವರಿ 16ರಂದು ಸೇರಿದ ಜಂಟೀ ಸಭೆಯಲ್ಲಿ ರೈತರನ್ನು ಸಂಘಟಿಸಲು ಮತ್ತು ನಿರ್ದಿಷ್ಟ ಸಮಸ್ಯೆಗಳ ಕುರಿತು ಸಮಾವೇಶ, ಮತ ಪ್ರದರ್ಶನ, ಚಳುವಳಿಗಳನ್ನು ನಡೆಸುವ ಕುರಿತು ಚರ್ಚೆ ಮಾಡಿ ಮೇಲಿನ ನಿರ್ಣಯ ಕೈಗೊಂಡಿತು.

ಹತ್ತಿ ಮತ್ತು ಜ್ಯೂಟ್[ನಾರು] ಬೆಲೆ ಕುಸಿಯುತ್ತಿರುವುದನ್ನೂ, ಸಿಂಥೆಟಿಕ್ ನಾರಿನ ಆಮದು ಮತ್ತು ಬಳಕೆಯಿಂದಾಗಿ ಆ ಬೆಲೆಗಳಿಗೆ ಉಂಟಾಗಬಹುದಾದ ಗಂಡಾಂತರದ ಕುರಿತು ಸಭೆ ಆತಂಕ ವ್ಯಕ್ತ ಮಾಡಿತು. ಅಖಿಲ ಭಾರತ ಮತ್ತು ರಾಜ್ಯಮಟ್ಟದಲ್ಲಿ ನಡೆಸಲ್ಪಡಲಿರುವ ಚಳುವಳಿ, ಸಮಾವೇಶ, ಸಭೆಗಳ ಕುರಿತು ನಿಶ್ಚಿತ ಕಾರ್ಯಕ್ರಮವನ್ನು ಶೀಘ್ರವೇ ನಿರ್ಧರಿಸಬೇಕೆಂದೂ ಒಪ್ಪಿಕೊಳ್ಳಲಾಯಿತು. ಈ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಎನ್.ಶಂಕರಯ್ಯ, ಉಪಾಧ್ಯಕ್ಷ ಹೆಚ್ ಎಸ್. ಸುರ್ಜಿತ್, ಜೊತೆ ಕಾರ್ಯದರ್ಶಿಗಳಾದ ಪಿ. ಕೆ. ತಂಡನ್, ಡಾ|| ಬಿಪ್ಲಬದಾಸ್ ಗುಪ್ತಾ ಮತ್ತು ಸಿ ಪಿ ಐ ನೇತೃತ್ವದ ಕಿಸಾನ ಸಭಾದ ಪರವಾಗಿ ಪ್ರ ಕಾರ್ಯದರ್ಶಿ ವೈ ವಿ. ಕೃಷ್ಣರಾವ್, ಅಧ್ಯಕ್ಷ ಇಂದ್ರದೀಪ್ ಸಿಂಹ, ಜೊತೆಕಾರ್ಯದರ್ಶಿಗಳಾದ ಸುರಜ ಪ್ರಸಾದ್ ಮತ್ತು ಚಜ್ಜೂಮಲ್ ವೈದ್ಯ ಅವರು ಪಾಲ್ಗೊಂಡಿದ್ದರು.

ವೈದ್ಯಕೀಯ ಕಾಲೇಜು ಸ್ಥಾಪನೆಗೆ ಎಸ್. ಎಫ್. ಐ. ವಿರೋಧ

ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಈಗಾಗಲೇ ಶೇ 75 ಮಿಕ್ಕ ಕಾಲೇಜುಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿದ್ದು, ವಿದ್ಯಾರ್ಥಿಗಳಿಂದ ಡೊನೇಶನ್ ಕ್ಯಾಪಿಟೇಶನ್ ಶುಲ್ಕ ವಸೂಲಿ ಮಾಡುವುದರ ಮೂಲಕ ಶಿಕ್ಷಣವನ್ನು ಈಗಾಗಲೇ ವ್ಯಾಪಾರೀಕರಣ ಗೊಳಿಸಿವೆ. ಈ ಸಂದರ್ಭದಲ್ಲಿ ಮಂಗಳೂರು ವಿ. ವಿ. ವ್ಯಾಪ್ತಿಯಲ್ಲಿ ಇನ್ನು 3 ವೈದ್ಯಕೀಯ 2 ಆಯುರ್ವೇದಿಕ, 2 ನರ್ಸಿಂಗ್, 1 ಡೆಂಟಲ್ ಹಾಗೂ 1 ಪದವಿ ನೂತನ ಖಾಸಗಿ ಕಾಲೇಜುಗಳನ್ನು ಪ್ರಾರಂಭಿಸಲು ನೋಂದಾವಣೆ ಅರ್ಜಿ ಸಲ್ಲಿಸಿದ್ದು, ಅವುಗಳಲ್ಲಿ ಬಹುತೇಕ ಸಂಸ್ಥೆಗಳಿಗೆ ನೋಂದಾವಣಿ ಸಮಿತಿಯು ನೋಂದಾವಣಿ ಶಫಾರಸ್ಸು ಮಾಡಿದೆ ಎಂದು ತಿಳಿದು ಬಂದಿದೆ. ಖಾಸಗಿ ವೈದ್ಯಕೀಯ ಹಾಗೂ ಪದವಿ ಕಾಲೇಜುಗಳನ್ನ ಪ್ರಾರಂಭಿಸಲು ಪರವಾನಿಗಿ ನೀಡಬಾರದೆಂದು ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್. ಎಫ್. ಐ. ದ.ಕ. ಜಿಲ್ಲಾ ಸಮಿತಿ, ಮಂಗಳೂರು ವಿಶ್ವವಿದ್ಯಾನಿಲಯ ಅಕಾಡೆಮಿ ಕೌನ್ಸಿಲನ್ನು ಜಿಲ್ಲೆಯ ವಿದ್ಯಾರ್ಥಿ ಸಮುದಾಯದ ಪರವಾಗಿ ವಿನಂತಿಸಿದೆ. ಎಸ್.ಎಫ್. ಐ ನೂತನ ವೈದ್ಯಕೀಯ ಸರ್ಕಾರಿ ಕಾಲೇಜುಗಳ ಸ್ಥಾಪನೆಗೆ ವಿರೋಧವಿಲ್ಲ. ಆದರೆ ಕ್ಯಾಪಿಟೇಶನ್-ಡೊನೇಶನ್ ಫೀ ಆಧಾರಿತ ಖಾಸಗಿ ಕಾಲೇಜುಗಳ ಸ್ಥಾಪನೆಗೆ ಎಸ್.ಎಫ್. ಐ ವಿರೋಧ ವ್ಯಕ್ತಪಡಿಸುತ್ತದೆ. ನೋಂದಾವಣಿಗೆ ಅರ್ಜಿ ಸಲ್ಲಿಸಿದ ಎಲ್ಲಾ ಕಾಲೇಜುಗಳನ್ನು ಸರ್ಕಾರಿ ಕಾಲೇಜುಗಳನ್ನಾಗಿ ಪ್ರಾರಂಭಿಸುವುದಿದ್ದಲ್ಲಿ ಎಸ್. ಎಫ್. ಐ. ತನ್ನ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ಸ್ಪಷ್ಟಪಡಿಸಿದೆ.

ಜಂಟೀ ಹೋರಾಟಕ್ಕೆ ಎಸ್. ಎಫ್. ಐ. ಕರೆ

ಮಂಗಳೂರು ವಿಶ್ವವಿದ್ಯಾನಿಲಯ ಅಕಾಡೆಮಿಕ್ ಕೌನ್ಸಿಲ್ ಸಭೆ ತಾ. 24-2-87 ರಂದು ಸೇರಿ ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಪರವಾನಿಗೆ ನೀಡಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್. ಎಫ್.ಐ.)ದ.ಕ.ಜಿಲ್ಲಾ ಸಮಿತಿ, ತೀವ್ರವಾಗಿ ಖಂಡಿಸುತ್ತದೆ. ಜಿಲ್ಲೆಯ ಜನಾಭಿಪ್ರಾಯವನ್ನು ಲೆಕ್ಕಿಸದೆ, ಖಾಸಗಿ ಸಂಸ್ಥೆಗಳ ಒತ್ತಡಕ್ಕೆ ಮಣಿದು ಶಿಕ್ಷಣದ ವ್ಯಾಪಾರಕ್ಕೆ ಮುಂದಾಗಿರುವುದನ್ನು ಎಸ್.ಎಫ್.ಐ. ಟೀಕಿಸಿದೆ.

ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿ.ವಿ. ಪ್ರಸ್ತುತ ನಿಲುವನ್ನು ಸೋಲಿಸಲು ಹಾಗೂ ಈ ವೈದ್ಯಕೀಯ ಖಾಸಗಿ ಕಾಲೇಜುಗಳಿಗೆ ಪರವಾನಿಗೆ ನೀಡದಂತೆ ರಾಜ್ಯ ಸರಕಾರವನ್ನು ಒತ್ತಾಯಿಸಲು ವಿದ್ಯಾರ್ಥಿ-ಯುವಜನರ ಹಾಗೂ ಇತರೇ ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ಒಳಗೊಂಡ ಐಕ್ಯ ಹೋರಾಟವನ್ನು ರೂಪಿಸಲು ಎಸ್.ಎಫ್.ಐ. ಕರೆ ನೀಡುತ್ತದೆ.

ಎಸ್.ಎಫ್.ಐ. ಮತಪ್ರದರ್ಶನ :

ಮಂಗಳೂರು ವಿ.ವಿ.ಅಕ್ಯಾಡಮಿಕ್ ಕೌನ್ಸಿಲ್ ಸಭೆ ಪ್ರಾರಂಭವಾಗುವ ಮುಂಚೆ ಎಸ್.ಎಫ್.ಐ. ಸದಸ್ಯರು ಮಂಗಳೂರು ವಿ.ವಿ.ಕೇಂದ್ರದಲ್ಲಿ ಮತ ಪ್ರದರ್ಶನ ನಡೆಸುವ ಮೂಲಕ ಪ್ರಸ್ತಾವಿತ ಯೋಜನೆಗೆ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿತು. ಬಳಿಕ ಎಸ್. ಎಫ್.ಐ. ನಿಯೋಗವೊಂದು ವಿ ವಿ. ಉಪಕುಲಪತಿಗಳನ್ನು ಭೇಟಿಯಾಗಿ ಮನವಿ ಅರ್ಪಿಸಿ ಚರ್ಚೆ ನಡೆಸಿತು. ನಿಯೋಗದಲ್ಲಿ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಸುನೀಲ್ ನಟೇಕರ್, ರಾಜ್ಯ ಸಮಿತಿ ಜೊತೆ ಕಾರ್ಯದರ್ಶಿ ಕೆ. ವಿಶ್ವನಾಥ್, ಜಿಲ್ಲಾ ಸಮಿತಿ ಜೊತೆ ಕಾರ್ಯದರ್ಶಿ, ವಸಂತ ಆಚಾರ್ಯ ಹಾಗೂ ಶ್ರೀನಿವಾಸ ಭಾಗವಹಿಸಿದ್ದರು.

ಸರ್ಕಾರಿ ಲಿಪಿಕ ನೌಕರರ ಬೃಹತ್ ವಿಧಾನ ಸೌಧ ಚಲೋ

ಕರ್ನಾಟಕ ಸರಕಾರದ ವಿವಿಧ ಇಲಾಖೆಗಳ ಸುಮಾರು 25 ಸಾವಿರ ಲಿಪಿಕ ನೌಕರರು [ಗುಮಾಸ್ತ ವರ್ಗದವರು] ತಮ್ಮ ಮುಖ್ಯ ಬೇಡಿಕೆಗಳನ್ನು ಒತ್ತಾಯಿಸಿ ದಿನಾಂಕ 2-3-1987 ರಂದು ರಾಜ್ಯದ 175 ತಾಲ್ಲೂಕುಗಳಿಂದಲೂ ಸಂಘದ ಬ್ಯಾನರ್‌ಗಳ ಸಹಿತ ಬೆಂಗಳೂರಿಗೆ ಆಗಮಿಸಿ, ಕಬ್ಬನ್ ಪಾರ್ಕಿನಿಂದ ಬೃಹತ್ ಮೆರವಣಿಗೆ ಹೊರಟು ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ನಡೆಸಿದರು.

ಈ ಕಾರ್ಯಕ್ರಮದ ಅಂಗವಾಗಿ ಸಂಘದ ಅಧ್ಯಕ್ಷೆ ಶ್ರೀಮತಿ ಕೆ.ವಿ. ಪಾರ್ವತಿಯವರ ಅಧ್ಯಕ್ಷತೆಯಲ್ಲಿ ಭಾರೀ ಬಹಿರಂಗ ಸಭೆಯನ್ನು ಏರ್ಪಡಿಸಲಾಯಿತು.

ಸಿ.ಐ ಟಿ ಯು. ಪರವಾಗಿ ಕಾಮ್ರೇಡ್ ಎನ್.ಕೆ. ಉಪಾಧ್ಯಾಯರು ಮಾತನಾಡಿ, ಸರಕಾರಿ ನೌಕರರ ಹೋರಾಟಕ್ಕೆ ಕಾರ್ಮಿಕರು, ರೈತರು ಆದಿಯಾಗಿ ಎಲ್ಲಾ ದುಡಿಯುವ ವರ್ಗ ಸಂಪೂರ್ಣ ಬೆಂಬಲ ಕೊಡುವುದಾಗಿ ಕರತಾಡನಗಳ ಮಧ್ಯೆ ಘೋಷಿಸಿದರು. ಅವರು ಕೇಂದ್ರ ಮತ್ತು ರಾಜ್ಯ ಸರಕಾರದ ಕೊರತೆ ಬಜೆಟನ್ನು ವಿಮರ್ಶಿಸಿ, ಒಂದೆಡೆ ವೇತನ ಆಯೋಗದ ಶಿಫಾರಸಿನಂತೆ ಸ್ವಲ್ಪ ವೇತನ ಹೆಚ್ಚಿಸಿ, ಮತ್ತೊಂದೆಡೆಯಲ್ಲಿ ಅತ್ಯಾವಶ್ಯಕ ವಸ್ತುಗಳ ಮೇಲೆ ಕರ ಹೇರಿ, ಬೆಲೆಹೆಚ್ಚಳಕ್ಕೆ ಅವಕಾಶ ಮಾಡಿಕೊಟ್ಟು, ತಾನು ಕೊಟ್ಟದ್ದಕಿಂತಲೂ ಹೆಚ್ಚು ಕಸಿದುಕೊಳ್ಳುವ ಸರಕಾರದ ನೀತಿಯನ್ನು ಖಂಡಿಸಿದರು.

ಸರಕಾರದ ಪರವಾಗಿ ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಬಸವಣ್ಣಪ್ಪನವರು ಆಗಮಿಸಿ ನೌಕರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಆಶ್ವಾಸನೆಯಿತ್ತರು. ಶಾಸಕ ನಾರಾಯಣ ಕುಮಾರ್ ರವರು ನೌಕರರ ಬೇಡಿಕೆಗಳನ್ನು ಬೆಂಬಲಿಸಿ ಮಾತನಾಡಿದರು.

ಎಲ್ಲಾ ಜಿಲ್ಲಾ ಸಂಘದ ಪ್ರತಿನಿಧಿಗಳು ಮಾತನಾಡಿ ಹೋರಾಟಕ್ಕೆ ಸಿದ್ಧರಾಗಬೇಕೆಂದು ನೌಕರರಿಗೆ ಕರೆ ಕೊಟ್ಟರು.

ಆರಂಭದಲ್ಲಿ ಉಪಾಧ್ಯಕ್ಷರಾದ ಶ್ರೀವಾಸು ನೇಗಿಗಾರ್‌ರವರು ಸ್ವಾಗತಿಸಿದ್ದು, ಕೊನೆಯಲ್ಲಿ ಸಂಘಟನಾ ಕಾರ್ಯದರ್ಶಿ ಶ್ರೀ ಕೆ. ನಂಜುಂಡಪ್ಪ ನವರು ವಂದಿಸಿದರು.

●

ಕೇರಳ ಚುನಾವಣೆಯಲ್ಲಿ ಮೂರು ಗುಂಪುಗಳು

[5ನೇ ಪುಟದಿಂದ]

ಹಿಡಿತವನ್ನು ಬಲಗೊಳಿಸುವುದೇ ಮೊದಲನೆಯ ರಂಗದ ಉದ್ದೇಶವಾಗಿದೆ. ಕೇರಳದಲ್ಲಿರುವ ಬಹುಮತಸ್ತರು ಮತ್ತು ಅಲ್ಪಮತಸ್ತ ಜಾತಿಯ ಗುಂಪುಗಳೊಳಗೆ ನೇರವಾದ ಘರ್ಷಣೆ ಉಂಟಾಗುವಂತೆ ಮಾಡುವುದಾಗಿದೆ. ಆ ರೀತಿಯಾದರೆ ಕೇರಳದಲ್ಲಿ ಆಂತರಿಕ ಯುದ್ಧವೇ ಆಗುವ ಸಂಭವವಿದೆ.

ಬಿ. ಜೆ. ಪಿ -ಹಿಂದೂ ಮುನ್ನನಿ ಜಂಟೀರಂಗ ಕೇರಳದ ಇಂದಿನ ಚುನಾವಣೆಯಲ್ಲಿ ಏನೂ ಪ್ರಭಾವ ಬೀರಲಾರದೆಂಬ ಅಭಿಪ್ರಾಯವನ್ನು ಬಹಳ ಮಂದಿ ಹೊಂದಿದ್ದಾರೆ. ಆದರೆ ಚುನಾವಣೆಯಲ್ಲಿ ಈ ಗುಂಪಿನ ಪ್ರವೇಶ, ಅಲ್ಪ ಮತಸ್ತರ ವಿರುದ್ಧ ಅವರ ಕುಚೇದ್ಯತನದ ಪ್ರಚಾರಗಳು ವಾತಾವರಣ ಕೆಡಿಸಿ ಜಾತೀಯ ದಂಗೆಗಳಿಗೆ ಅವಕಾಶ ಮಾಡಿಕೊಡಬಹುದು. ಕಾಂಗ್ರೆ ಆಡಳಿತೆಯಲ್ಲಿರುವ ಮುಸ್ಲಿಂ-ಕ್ರಿಶ್ಚನ್ ಮೂಲಭೂತವಾದಿಗಳು ಅಂಥ ದಂಗೆಗಳಿಗೆ ಪ್ರಚೋದನೆ ನೀಡಬಹುದಾಗಿದೆ.

ಮುಸ್ಲಿಂ ಲೀಗ್ 1970 ರಿಂದಲ್ಲೂ ಕೇರಳ ಆಡಳಿತೆಯಲ್ಲಿ ಕಾಂಗ್ರೆಸ್ಸಿನ ಜೊತೆಯಲ್ಲಿದ್ದಾಗ, ಹಲವಾರು ಸಲ ಜಾತೀಯ ದಂಗೆಗಳು ಸಂಭವಿಸಿದವು. ಅವುಗಳ ಪೈಕಿ 1971ರಲ್ಲಿ ತಲ್ಲಚೇರಿಯ ದಂಗೆ ಆನಂತರದ ಅಲೆಪಿ, ತ್ರಿಂಡ್ರಮ್ ದಂಗೆಗಳು ಅತ್ಯಂತ ದಾರುಣಮಯವಾಗಿದ್ದವು. ಅಧಿಕಾರದಲ್ಲಿದ್ದ ಮುಸ್ಲಿಮ್‌ಲೀಗ್ ಮಂತ್ರಿಗಳು ಬರೇ ಪ್ರತ್ಯಕ್ಷರಾಗಿಯೇ ಉಳಿಯಬೇಕಾಯ್ತು. ಕಾಂಗ್ರೆ ಸಿ.ಪಿ.ಐ. (ಎಂ) ಮಾತ್ರ ಮುಸಲ್ಮಾನರ ರಕ್ಷಣೆ ಮಾಡಬೇಕಾಯಿತು. ಕಾಂಗ್ರೆ ಮುಖಂಡತ್ವದ ರಂಗ ಸಭೆಯಲ್ಲಿ ಕಾಲಿಟ್ಟದ್ದಾದರೆ ಮತ್ತೆ ಅಧಿಕಾರಕ್ಕೆ ಬಂದದ್ದಾದರೆ ಬಿಜೆಪಿ-ಹಿಂದು ಮುನ್ನಾನಿ ಗುಂಪು ವಿಧಾನ ಹಿಂದಿನಂಥದ್ದೇ ಪರಿಸ್ಥಿತಿಯನ್ನು ಎದುರಿಸಬೇಕಾದೀತು. ಬಿಜೆಪಿ ಹಿಂದು ಮುನ್ನಾನಿ ಗುಂಪು ಚುನಾವಣೆಯಲ್ಲಿ ಗೆದ್ದುಬಾರದಿದ್ದರೂ ಕೂಡ ಅವರ ಚುನಾವಣಾ ಪ್ರಚಾರ ಮತೀಯ ದಂಗೆಗೆ ಸಹಾಯವಾಗಬಹುದು. ಆದ್ದರಿಂದ ಕಾಂಗ್ರೆ ರಂಗದ ವಿರುದ್ಧ ಹೋರಾಡುತ್ತಿರುವಾಗಲೇ ಎರಡನೇ ಗುಂಪಿನ ಅಪಾಯದ ಕುರಿತು ಜನರನ್ನು ಎಚ್ಚರಿಸುವುದು ಅತ್ಯಗತ್ಯ.

ಕೇರಳದಲ್ಲಿ ಈಗಿರುವ ವಾತಾವರಣವನ್ನು ನೋಡುವಾಗ ಎಡ ಪ್ರಜಾಪ್ರಭುತ್ವ ರಂಗ ಆ ಎರಡೂ ಒಕ್ಕೂಟಗಳ ವಿರುದ್ಧ ನಡೆಸಿರುವ ಪ್ರಚಾರದಿಂದಾಗಿ, ಎಡ ಪ್ರಜಾಪ್ರಭುತ್ವ ರಂಗಕ್ಕೆ ಒಳ್ಳೆ ಭವಿಷ್ಯ ಕಂಡು ಬರುತ್ತಿದೆ. ಅದು ಕಾಂಗ್ರೆ ಮುಖಂಡತ್ವದ ರಂಗವನ್ನು ಅಲ್ಪಮತದ ಸ್ಥಾನಕ್ಕೆ ತಳ್ಳಬಹುದು ಬಿ ಜೆ.ಪಿ.-ಹಿಂದೂ ಮುನ್ನನಿಗಳಿಗೆ ಒಂದು ಸ್ಥಾನವನ್ನೂ ಗೆಲ್ಲಿಸದೆ, ವಿಧಾನ ಸಭೆಗೆ ಪ್ರವೇಶ ನಿರಾಕರಿಸಬಹುದು.

ಅಂಥ ಭವಿಷ್ಯ ಕಾಣಲು ಕಾರಣವೇನು? ರಾಷ್ಟ್ರೀಯ ಮತ್ತು ಜ್ಯಾತ್ಯಾತೀತ ಪಕ್ಷವೆಂದು ಹೇಳಿಕೊಳ್ಳುವ ಕಾಂಗ್ರೆಸ್ಸು ಮುಸ್ಲಿಂ ಲೀಗ್-ಕೇರಳ ಕಾಂಗ್ರೆಸ್ಸಿನಂಥ ಜಾತಿವಾದಿಗಳ ಹಾಡಿಗೆ ಕುಣಿಯಬೇಕಾಗುತ್ತದೆ. ನಿಷ್ಠಾವಂತ ಕಾಂಗ್ರೆಸ್ಸಿಗರ ಮನೋಧರ್ಮಕ್ಕೆ ಅದು ಸರಿಹೊಂದುವುದಿಲ್ಲ. ಆದ್ದರಿಂದ ಪಕ್ಷದ ಶಿಸ್ತಿಗನುಸಾರವಾಗಿ ಅವರು ಕಾಂಗ್ರೆಗೆ ಮತ ನೀಡಬಹುಹು. ಆದರೆ ಬಹಳಷ್ಟು ಜನ ಹಾಗೇ ಮಾಡಲು ನಿರಾಕರಿಸಬಹುದಾಗಿದೆ.

ಮುಸ್ಲಿಂ ಲೀಗಿನ ಕೆಲವು ಮಂತ್ರಿಗಳು ಕಾಂಗ್ರೆ ಮುಖಂಡತ್ವದ ರಂಗದ ಸರ್ಕಾರದಲ್ಲಿದ್ದರೂ ಕೂಡ ಬಿ.ಜೆ.ಪಿ.-ಹಿಂದು ಮುನ್ನಾನಿಗಳಿಂದ ರಕ್ಷಣೆ ಪಡೆಯುವುದು ಕಷ್ಟ. ಕಾಂಗ್ರೆಗಿಂತ ಹೆಚ್ಚಾಗಿ ತಮಗೆ ಎಡ ಪ್ರಜಾಪ್ರಭುತ್ವ ರಂಗದಿಂದಲೇ ರಕ್ಷಣೆ ಸಾಧ್ಯವೆಂಬ ಭಾವನೆ ಮುಸಲ್ಮಾನರಲ್ಲಿ ಮೂಡಿಬರುತ್ತಿದೆ. ಆದ್ದರಿಂದ ಮುಸಲ್ಮಾನರು ಕೂಡ ಎಲ್.ಡಿ.ಎಫ್.ಗೆ ಮತ ನೀಡಬಹುದಾಗಿದೆ. ಕೇಂದ್ರ ಸರಕಾರದ ನೀತಿಯ ವಿರುದ್ಧ ಹೋರಾಡಲು ಕೇರಳ ಕಾಂಗ್ರೆಸ್ ಸ್ಥಾಪನೆಯಾಗಿತ್ತು. ಆದರೆ ಅದರ ಮುಖಂಡರುಗಳೆಲ್ಲ ಈಗ ಹೆಚ್ಚು ಅಧಿಕಾರ ಸ್ಥಾನ ಪಡೆಯುವುದರಲ್ಲೇ ಮಗ್ನರಾಗಿದ್ದಾರೆ. ಈ ಅಂಶವನ್ನು ಕೇರಳ ಕಾಂಗ್ರೆಸ್ಸಿನ ಸಾಧಾರಣ ಸದಸ್ಯರು ಮರೆತಿಲ್ಲ. ಕುರಿಗಳಂತೆ ತಮ್ಮನ್ನು ಮತಗಟ್ಟೆಗೆ ಕರೆದುಕೊಂಡುಹೋಗಿ ತಮ್ಮ ಪಕ್ಷಕ್ಕೆ ಮತ ಹಾಕಿಸಿದ್ದಾದರೆ ಅದು ಸರ್ವಾಧಿಕಾರಿ ಕೇಂದ್ರವನ್ನು ಬಲಪಡಿಸಬಹುದೆಂಬ ತಿಳುವಳಿಕೆ ಬರುತ್ತಿದೆ.

ಎಡಪ್ರಜಾಪ್ರಭುತ್ವರಂಗ ಸ್ವತಂತ್ರ ಶಕ್ತಿಯಾಗಿ ಬೆಳೆದು ಬರುತ್ತಿರುವುದನ್ನು ಮೇಲಿನ ಎರಡೂ ಒಕ್ಕೂಟಗಳ ಜನರು ಆಸೆಗಣ್ಣಿನಿಂದ ನೋಡುತ್ತಿದ್ದಾರೆ. ರಾಜ್ಯದಲ್ಲಿ ಜಾತೀಯ ದಂಗೆಗಳು ಸಂಭವಿಸದೆ ಐಕ್ಯತೆ, ಸೌಹಾರ್ದತೆಯ ಸಹಬಾಳ್ವೆ, ಶಾಂತಿ ವಾತಾವರಣ ಇರಬೇಕೆಂಬ ಅಪೇಕ್ಷೆ ಹೊಂದಿದವರೂ ಎಲ್ಲಾ ಪಕ್ಷ ಮತ್ತು ಗುಂಪುಗಳಲ್ಲಿದ್ದಾರೆ. ಅವರಿಗೆಲ್ಲ ಎಡ ಪ್ರಜಾಪ್ರಭುತ್ವ ರಂಗವೇ ಪರ್ಯಾಯ ಶಕ್ತಿಯಾಗಿ ಎದ್ದು ಕಾಣುತ್ತಿದೆ. ಆದ್ದರಿಂದಲೇ ಸರ್ವಾಧಿಕಾರಿ, ಜಾತೀಯ-ಮತೀಯ ಶಕ್ತಿಗಳೆಲ್ಲ ಈ ಚುನಾವಣೆಯಲ್ಲಿ ಸೋಲಬಹುದೆಂಬ ಆಸೆ ಇಟ್ಟುಕೊಂಡಿದ್ದೇವೆ.

ಭಾರತದ ಶೈಲಿಯಲ್ಲಿ ರೀಗನ್ ಆರ್ಥಿಕ ನೀತಿ

"ಶ್ರೀಮಂತರಿಗೆ ಹೆಚ್ಚು ಹಣ ಸಂಪಾದಿಸುವ ಅವಕಾಶ ವಿತ್ತರೆ, ಅವರು ಹೆಚ್ಚು ಚೆನ್ನಾಗಿ ಶ್ರಮಿಸುವರು ಬಡವರಿಗೆ ಕಡಿಮೆ ಹಣ ಸಂಪಾದಿಸುವ ಪರಿಸ್ಥಿತಿ ನಿರ್ಮಿಸಿದರೆ, ಅವರು ಹೆಚ್ಚಾಗಿ ಶ್ರಮಿಸುವರು ಎಂಬ ಅಸತ್ಯಕರ ವಾದವನ್ನು ಅಮೇರಿಕದ ಅಧ್ಯಕ್ಷ ರೀಗನ್ ಅನುಸರಿಸಿಕೊಂಡು ಬಂದಂತೆಯೇ ರಾಜೀವಗಾಂಧಿಯೂ ತನ್ನ ನೂತನ ಆರ್ಥಿಕ ನೀತಿಯಲ್ಲಿ ಅನುಕರಣೆ ಮಾಡುತ್ತಿದ್ದಾರೆ. ರಾಜೀವ ಗಾಂಧಿಯ ನಿಜವಾದ ಆರ್ಥಿಕ ಗುರು ಯಾರು ಎನ್ನುವುದರಲ್ಲಿ ಸಂಶಯ ವಿದೆಯೇ"

ಕಾರ್ತಿಕ್‌ರೈ. "ಪೀಪಲ್ಸ್ ಡೆಮಾಕ್ರಸಿ," 2[illegible].2.87

ವಿಜ್ಞಾನ ತಂತ್ರಜ್ಞಾನ

ಡಾ|| ಝುಫ್ರುಲ್ಲಾ ಚೌಧರಿಯವರ ಒಂದು ಹೋರಾಟ

ಇದು ಬಾಂಗ್ಲಾದೇಶದ ಕತೆ. ಬಾಂಗ್ಲಾದೇಶದ ಕತೆ ಮಾತ್ರವಲ್ಲ ಮೂರನೆಯ ಜಗತ್ತಿನ ಯಾವುದೇ ರಾಷ್ಟ್ರದ ಕಥೆಯಾಗಬಹುದು–ತಂತ್ರಜ್ಞಾನದಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ವಿದೇಶಿ ಕಂಪೆನಿಗಳ ಹಿಡಿತದಿಂದ, ಮೋಸದಿಂದ ಪಾರಾಗಲು ಪ್ರಯತ್ನ ಪಟ್ಟರೆ. ಈ ದೇಶದಲ್ಲಿ ಝುಫ್ರುಲ್ಲಾ ಚೌದರಿ ಎಂಬ ಎಡ ಪಂಥೀಯ ಧೋರಣೆಯ ಒಬ್ಬ ವೈದ್ಯ ಜನಹಿತಕ್ಕಾಗಿ ದುಡಿಯುವ ಎಡ ಪಂಥೀಯ ವೈದ್ಯರ ಸಂಘಟನೆಯನ್ನು ಹಳ್ಳಿ ಹಳ್ಳಿಗಳಲ್ಲಿ ಸ್ಥಾಪಿಸಿದ ವ್ಯಕ್ತಿ. ಇವರು ಮತ್ತು ಇವರ ಸಂಗಾತಿಗಳು ಒಂದು ಅಧ್ಯಯನ ನಡೆಸಿದರು. ಇದರಂತೆ ಬಾಂಗ್ಲಾದೇಶದ ಬಡ ಜನರ ಆರೋಗ್ಯ ಕಾಪಾಡಲು ಅವಶ್ಯ ಇರುವ ಔಷಧಿಗಳ ಪಟ್ಟಿ ಮಾಡಲಾಯಿತು. ಆಶ್ಚರ್ಯದ ಸಂಗತಿ ಏನೆಂದರೆ, ಬಾಂಗ್ಲಾದೇಶದ ಜನತೆಯ ಎಲ್ಲಾ ಕಾಯಿಲೆಗಳ ಸುಧಾರಣೆಗೂ ಬೇಕಾಗುವ ಔಷದ ಕೇವಲ 70. ಆದರೆ ಮಾರುಕಟ್ಟೆಯಲ್ಲಿ, ವಿವಿಧ ರೂಪಗಳಲ್ಲಿ 36,000 ಔಷಧಿಗಳಿದ್ದುವು. ಇವೆಲ್ಲವೂ ಬಡ ಜನತೆಯ ಕೈಗೆಟಕದಷ್ಟು ದುಬಾರಿ. ಕೆಲವೊಂದು ಔಷಧಿಗಳಲ್ಲಿ 700-800ಶೇ ಲಾಭ! ಇವೆಲ್ಲವೂ ಸಾಮ್ರಾಜ್ಯಶಾಹಿಗಳ ಒಡೆತನದಲ್ಲಿ. ಈ ಅಧ್ಯಯನವನ್ನು ನಡೆಸಿದ ಝುಫ್ರುಲ್ಲಾ ಸರಕಾರಕ್ಕೆ ಒಂದು ವರದಿಯನ್ನೂ, ಮನವಿಯನ್ನೂ ಕೊಟ್ಟರು. ಈ ವರದಿಯಲ್ಲಿ ಸಾಮ್ರಾಜ್ಯಶಾಹಿ, ಜೀವನಕ್ಕೆ ಅತೀ ಅವಶ್ಯ ಇರುವ ಔಷಧಿಗಳ ಮೇಲೆ ಯಾವ ರೀತಿಯ ಹಿಡಿತ ಇಟ್ಟುಕೊಂಡಿದ್ದಾನೆ, ಯಾವ ರೀತಿಯ ಮೋಸ ಎಸಗುತ್ತಾನೆ, ಯಾವರೀತಿ ಅತೀ ಲಾಭಗಳಿಸುತ್ತಾನೆ ಎಂದು ಸವಿವರವಾಗಿ ವಿವರಿಸಿ, ಎಲ್ಲಾ ಔಷಧಿ ಕಂಪನಿಗಳನ್ನೂ ರಾಷ್ಟ್ರೀಕರಿಸಬೇಕು, ಸರಕಾರಕ್ಕೆ ಸಮಗ್ರವಾದ ಒಂದು ಆರೋಗ್ಯ ನೀತಿ ರೂಪಿಸಬೇಕೆಂದು ವಿನಂತಿಸಿದರು. ಇಂತಹ ಸಮಯಕ್ಕಾಗಿ ಕಾಯುತ್ತಿದ್ದ ಸರಕಾರ ಒಡನೆಯೇ ಇದನ್ನು ಅಂಗೀಕರಿಸಿತು. ಸರಕಾರ ಇದರತ್ತ ಗಮನ ಹರಿಸುತ್ತಲೇ ಸಾಮ್ರಾಜ್ಯಶಾಹೀ ಶಕ್ತಿಗಳು ಚುರುಕಾದವು. ಎರಡು ಮಟ್ಟದಲ್ಲಿ ಈ ದುಷ್ಟ ಶಕ್ತಿಗಳು ಕಾರ್ಯ ಪ್ರಾರಂಭಿಸಿದವು. ಒಂದನೆಯದಾಗಿ, ಚೌಧುರಿಯವರ ಸಂಗಾತಿಗಳನ್ನು ನಾಶ ಮಾಡುವ ಪ್ರಯತ್ನ ನಡೆಯಿತು. ಇದಕ್ಕೆ ದುಡ್ಡಿಗಾಗಿ ಏನು ಮಾಡಲೂ ಹೇಸದ ಕೊಲೆಗಾರರನ್ನು ಉಪಯೋಗಿಸಲಾಯಿತು. ಢಾಕಾದಂತ ನಗರದಲ್ಲಿ ಝುಫ್ರುಲ್ಲಾ, ಶಸ್ತ್ರಧಾರಿ ಸಿಪಾಯಿಗಳ ನೆರವಿನೊಂದಿಗೆ ತಿರುಗಬೇಕಾಗಿ ಬಂತು. ಎರಡನೆಯದಾಗಿ ರಾಜಕೀಯ ಮಟ್ಟದಲ್ಲಿ ಕಾರ್ಯಾಚರಣೆ ಪ್ರಾರಂಭವಾಯಿತು. ಅಮೇರಿಕಾ, ಫ್ರಾನ್ಸ್, ಜರ್ಮನ್, ಸ್ವಿಜರ್‌ಲ್ಯಾಂಡ್, ಇಂಗ್ಲೆಂಡ್, ಈ ದೇಶಗಳ ರಾಯಭಾರಿ ಕಛೇರಿಗಳಲ್ಲಿ ಜೇನು ಗೂಡಿನಂತಹ ಚುರುಕಿನ ಕಾರ್ಯಕ್ರಮ ಪ್ರಾರಂಭವಾಯಿತು. ಬೆದರಿಕೆಯೊಡ್ಡಿ ಇಲ್ಲವೇ ಲಂಚಕೊಟ್ಟು ಸರಕಾರೀ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಳ್ಳಬೇಕು, ಸರಕಾರದ ಆರೋಗ್ಯ ನೀತಿ ಅನುಷ್ಠಾನಕ್ಕೆ ಬಾರದಂತೆ ನೋಡಿಕೊಳ್ಳಬೇಕು, ಇದರ ಬಗ್ಗೆ ಯಾವ ಕಾರ್ಯಕ್ಕೂ ತಯಾರಾಗಿರಬೇಕು ಎಂದು ರಾಯಭಾರಿಗಳನ್ನು ಆಜ್ಞಾಪಿಸಲಾಗುತ್ತಿತ್ತು. ಇದನ್ನು ಸಾಧಿಸಲಾಗದ ರಾಯಭಾರಿಗಳನ್ನು ರಾತ್ರೋರಾತ್ರಿ ವಾಪಾಸು ಕರೆಯಿಸಿಕೊಂಡು ಮತ್ತೊಬ್ಬ ರಾಯಭಾರಿಯನ್ನು ನೇಮಿಸಲಾಗುತ್ತಿತ್ತು. ಬಾಂಗ್ಲಾ ಸರಕಾರ ಔಷಧಿ ತಯಾರಿಸುವ ಮಾರುವ ಬಹುದೇಶೀಯ ಔಷಧಿ ಕಂಪನಿಗಳಿಗೆ ದೇಶ ಬಿಟ್ಟುಹೋಗುವ ಆಜ್ಞೆ ಮಾಡಿತು ಕಂಪನಿಗಳೆನೋ ಹೋದವು. ಆದರೆ ಜನತೆಗೆ ಬೇಕಾಗುವ 70 ಔಷಧವನ್ನು ಬೇಕಾದ ಪ್ರಮಾಣದಲ್ಲಿ ಅತೀ ಕಡಿಮೆ ಬೆಲೆಯಲ್ಲಿ ಉತ್ಪಾದಿಸುವುದು ಈಗ ಬಾಂಗ್ಲಾ ಸರಕಾರದ ಜವಾಬ್ದಾರಿ ಆಯಿತು. ಇದಕ್ಕೆ ಬೇಕಾಗುವ ತಂತ್ರಜ್ಞಾನ, ಯಂತ್ರೋಪಕರಣಗಳೆಲ್ಲವೂ ಸಾಮ್ರಾಜ್ಯಶಾಹೀಗಳ ಕೈಯಲ್ಲೇ ಇರುವುದು ಬಾಂಗ್ಲಾ ದೇಶಕ್ಕೆ ಈ ಯಂತ್ರಗಳನ್ನು ಮಾರದಂತೆ ಎಲ್ಲಾ ಯಂತ್ರ ಉತ್ಪಾದಕರಿಗೆ ಈ ಸಾಮ್ರಾಜ್ಯಶಾಹೀ ಸರಕಾರಗಳು ಬಂಧನ ವಿಧಿಸಿದವು. ಆದರೆ ಬಂಡವಾಳಶಾಹೀಗಳ ನಡುವೆಯೇ ಇರುವ ಸ್ಪರ್ಧೆ ಈಗ ಅತೀ ತೀಕ್ಷ್ಣ ಮಟ್ಟವನ್ನು ತಲುಪಿದೆ. 4ಪಾಲು, 6ಪಾಲು ಹೆಚ್ಚಿಗೆ ಬೆಲೆ ತೆರುತ್ತೇನೆಂದಾಗ, ಸರಕಾರದ ಪ್ರತಿಭಂದವನ್ನು ವಿರೋಧಿಸಿ ಒಂದೊಂದೇ ಯಂತ್ರೋತ್ಪಾದಕರು, ಬಾಂಗ್ಲಾ ದೇಶಕ್ಕೆ ಯಂತ್ರೋಪಕರಣಗಳನ್ನು ಒದಗಿಸಿದವು. ಇವುಗಳನ್ನು ಉಪಯೋಗಿಸಿ ಜನತೆಗೆ ಬೇಕಾದ ಔಷಧಗಳನ್ನು ತಯಾರಿಸಲಾಯಿತು. ಪ್ರತಿ ಹಳ್ಳಿಯಲ್ಲಿರುವ ಸರಕಾರೀ ಹಾಗೂ ಖಾಸಗೀ ದವಾಖಾನೆಗಳ ಮೂಲಕ ಜನತೆಗೆ ಸುಗಮವಾಗಿ ಔಷಧಿ ಸಿಗುವಂತೆ ನೋಡಿಕೊಳ್ಳಲಾಯಿತು. ಝುಫ್ರುಲ್ಲಾ ಇಂದಿಗೂ ಜೀವಂತವಾಗಿದ್ದಾರೆ. ○

ರೇಗನ್ ಯುದ್ಧ ಬಜೆಟ್

ಶಸ್ತ್ರ ಬೇಕೆ ಶಸ್ತ್ರ

ರೇಗನ್‌ರವರ ಯುದ್ಧ ದಾಹ, ಶಸ್ತ್ರದಾಹ ಮಿತಿಮೀರಿಸುವಷ್ಟು ಭಯ ಹುಟ್ಟಿಸುತ್ತದೆ. 1988ರ ರಾಜ್ಯಾದಾಯದ ಪಟ್ಟಿ ನೋಡಿದರೆ ರೇಗನ್‌ರವರ ಬಣ್ಣ ಬಯಲಾಗುತ್ತದೆ.

ರೇಗನ್ ಆಧುನಿಕ ಅರ್ಥಶಾಸ್ತ್ರದ ಪ್ರಕಾರ ಈ ಬಜೆಟ್ ಸಂಪೂರ್ಣವಾಗಿ ಯುದ್ಧ ಬಜೆಟ್ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಭಾರಿಯ ಬಜೆಟ್ ಪೆಂಟಗನ್‌ಗೋಸ್ಕರ 312 ಬಿಲಿಯನ್ ಡಾಲರ್‌ಗಳನ್ನು ಮೀಸಲಿಟ್ಟಿದ್ದ, ಈ ಪೆಂಟಗನ್ ಯೋಜನೆಯಲ್ಲಿ ಸ್ಟಾರ್‌ವಾರ್‌ಗಳದ್ದು ಪ್ರಮುಖ ಸ್ಥಾನ.

ಇದಲ್ಲದೆ ಈ ಕರಡು ಬಜೆಟ್ ನಿಕರಾಗುವಾದಲ್ಲಿ ಭಯೋತ್ಪಾದನೆಯನ್ನುಂಟುಮಾಡುತ್ತಿರುವ ಕಾಂಟ್ರಾಗಳಿಗಾಗಿ 105 ಮಿಲಿಯ ಡಾಲರ್‌ಗಳನ್ನು ಮೀಸಲಿಟ್ಟಿದೆ.

ಈ ಬಜೆಟ್ ಸ್ಪರ್ಧಾತ್ಮಕ ಬಜೆಟ್ ಆಗಿದ್ದು ಅಮೇರಿಕಾ ಮಿಲಿಟರಿ ಹಾಗೂ ಶಸ್ತ್ರದ ಮೇಲೆ ವಿನಿಯೋಗಿಸುತ್ತಿರು ಹಣ ರಾಜ್ಯ ಸಹಾ ಮಿಲಿಟರಿ ವೆಚ್ಚವನ್ನು ಹೆಚ್ಚು ಮಾಡಿಕೊಳ್ಳುವಂತೆ ಒತ್ತಾಯಿಸುತ್ತದೆ ಎಂದು ಭಾವಿಸಲಾಗಿದೆ ಎಂದು ಅಮೇರಿಕಾದ ರಕ್ಷಣಾ ಕಾರ್ಯದರ್ಶಿ ವೇನ್ ಬರ್ಗರ್ ಹೇಳಿದ್ದಾರೆ.

ಥ್ಯಾಲೆಂಡಿನಲ್ಲಿ ಅಮೇರಿಕಾ ಶಸ್ತ್ರಾಗಾರ

ಅಮೇರಿಕಾ 'ಯುದ್ಧ ಬೇಡ' ಎಂಬೆಲ್ಲಾ ಬೊಬ್ಬೆಗಳ ನಡುವೆಯೂ ತನ್ನ ಒಂದೊಂದೇ ಹೆಜ್ಜೆ ಯುದ್ಧದತ್ತ ಇಡುತ್ತಲೇ ಇದೆ. ಜನವರಿ 9ರಂದು ಥಾಯ್‌ಲ್ಯಾಂಡ್‌ಜೊತೆ ಶಸ್ತ್ರಾಗಾರವನ್ನು ನಿರ್ಮಿಸಲುಅಮೇರಿಕ ಒಪ್ಪಂದ ಮಾಡಿಕೊಂಡಿತು. 100 ಮಿಲಿಯ ಡಾಲರ್‌ಗಳ ವೆಚ್ಚದ ಈ ಶಸ್ತ್ರಾಗಾರವನ್ನು ಸಮರ್ಥಿಸಿಕೊಳ್ಳುತ್ತಾ ಅಮೇರಿಕದ ವಕ್ತಾರರು 'ಮಾಸ್ಕೊದಿಂದ ಬೆಂಬಲ ಪಡೆದ ವಿಯಟ್ನಾಂನಿಂದ ರಕ್ಷಿಸಿಕೊಳ್ಳಲು ಇದು ಅತ್ಯಗತ್ಯ' ಎಂದು ಹೇಳಿದ್ದಾರೆ. ●

ರಶ್ಯದ ಪಡೆ ವಾಪಸ್

ಅಫ್‌ಘಾನಿಸ್ತಾನದಲ್ಲಿ ನೆಲೆಸಿರುವ ತನ್ನ ಸೇನೆಯ ಕೆಲವು ಭಾಗಗಳನ್ನು ಹಿಂತೆಗೆದುಕೊಳ್ಳುತ್ತೇನೆಂದು ಘೋಷಿಸಿದ ರಷ್ಯ ಅದು ಪ್ರಥಮ ಕ್ರಮವಾಗಿ ಕೆಲವು ರೆಜಿಮೆಂಟ್‌ಗಳನ್ನು ಹಿಂತೆಗೆದುಕೊಂಡಿತು.

ಎಪ್ರಿಲ್ ಮತ್ತುಜೂನ್ ಹೊತ್ತಿಗೆ ಮಂಗೋಲಿಯದಲ್ಲಿ ತಾತ್ಕಾಲಿಕವಾಗಿ ನೆಲೆಸಿರುವ ಸೇನೆಯ ಭಾಗಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಸೋವಿಯತ್ ರಷ್ಯದ ವಕ್ತಾರರು ಮಾತನಾಡುತ್ತಾ ಪ್ಯಾನ್-ಏಷ್ಯಾದ ರಕ್ಷಣೆಗೆ ಇದು ಸಹಾಯ ಮಾಡಬಹುದೆಂದು ಆಶಿಸಿದ್ದಾರೆ.

ಥೈಲೆಂಡಿನಲ್ಲಿ ಅಮೇರಿಕಾ ಶಸ್ತ್ರವನ್ನು ಶೇಖರಿಸುತ್ತಿರುವ ಹಿನ್ನೆಲೆಯಲ್ಲಿಯೇ ರಷ್ಯದ ಈ ಕ್ರಮ ಶಾಂತಿಗಾಗಿ ಅದರ ಕಳಕಳಿಯನ್ನು ತೋರಿಸುತ್ತಿದೆ. ●

ಪ್ರಜಾಸತ್ತಾತ್ಮಕ ಸಂಘಟನೆಗಳ ಗಮನಾರ್ಹ ಬೆಳವಣಿಗೆ

(2ನೇ ಪುಟದಿಂದ)

ತ್ತಿದೆ. ಬುಡಕಟ್ಟು ಜನಾಂಗಕ್ಕೆ ಸೇರದ ಜನರನ್ನು ಒಕ್ಕಲೆಬ್ಬಿಸಬೇಕೆನ್ನುವುದು ಅವರ ಬೇಡಿಕೆ ಟಿ.ಎನ್.ವಿ. ಭಯೋತ್ಪಾದಕರನ್ನು ಸೆರೆಹಿಡಿದಾಗಲೆಲ್ಲ ಅವರ ಬಿಡುಗಡೆಗೊಳಿಸಬೇಕೆಂದು ಕಾಂಗ್ರೆಸ್ [ಐ]ನವರೂ ಟಿ.ಯು.ಜೆ.ಎಸ್.ನವರೂ ಒಟ್ಟಿಗೇ ಹುಇಲೆಬ್ಬಿಸುತ್ತಾರೆ. ಇಂತಹ ಸಮಯದಲ್ಲೇ ಅವರು 'ಬಂದ್' ಮತ್ತು 'ರಸ್ತೆರೋಕೋ' ಮುಂತಾದ ಕರೆ ನೀಡಿ ಪೋಲೀಸರು ನಗರ ಪ್ರದೇಶದಲ್ಲೇ ಯಾವಾಗಲೂ ತೊಡಗುವಂತೆ ನೋಡಿಕೊಳ್ಳುತ್ತಾರೆ.

ಗಣಶಕ್ತಿ

ಭಯೋತ್ಪಾದಕರ ಬಗ್ಗೆ ನೀವು ಮೃದುವಾದ ನಿಲುವು ತಳೆದಿದ್ದೀರೆಂದು ಕೆಲವು ಪತ್ರಿಕೆಗಳು ಆಪಾದಿಸಿದಯಲ್ಲ?

ನೃಪೇನ್

ಅದು ಹೇಗೆ ಸಾಧ್ಯ? ಭಯೋತ್ಪಾದಕರು ಕೊಲ್ಲುತ್ತಿರೋದು ನಮ್ಮ ಜನಗಳನ್ನ! ನಮ್ಮ ಉಪ ಮುಖ್ಯಮಂತ್ರಿ ದಶರಥದೇವ ಬರ್ಮನ್ ಅವರ ಮೇಲೂ ಭಯೋತ್ಪಾದಕರು ಹಲ್ಲೆ ನಡೆಸಿದ್ದಾರೆ; ಮತ್ತು ಇದನ್ನು ತಾವೇ ನಡೆಸಿದ್ದೆಂದೂ ಘೋಷಿಸಿಕೊಂಡಿದ್ದಾರೆ. ಭಯೋತ್ಪಾದಕರ ವಿರುದ್ಧ ಮೃದುವಾದ ನಿಲುವು ತಳೆಯುವ ಪ್ರಶ್ನೆಯೇ ಇಲ್ಲ. ಆದರೆ ಕೆಲವೇ ಜನ ಕಿಡಿಗೇಡಿಗಳಿರುವ ಮಾತ್ರಕ್ಕೆ ಇಡೀ ಬುಡಕಟ್ಟು ಜನಾಂಗದ ಜನರನ್ನೆ ದೂಷಿಸುವುದೂ ಸರಿಯಲ್ಲ ಕಾಂಗ್ರೆಸ್ ಆಧಿಪತ್ಯದಲ್ಲಿ ಅವರಿಗೆ ದೊರೆತಿಲ್ಲದ ಪ್ರಗತಿ ಮತ್ತು ಅಭಿವೃದ್ಧಿಯನ್ನು ಅವರಿಗೆ ಒದಗಿಸಿಕೊಡುವುದಕ್ಕೆ ನಾವು ಬದ್ಧರು. ಇಂದಿರಾ ಗಾಂಧಿಯವರಿಗೆ ಬರೆದಿದ್ದ ಪತ್ರವೊಂದರಲ್ಲಿ ಟಿ.ಯು.ಜೆ.ಎಸ್. ಮುಂದಾಳು ಶ್ಯಾಮ ಚರಣ್ ಸ್ವತಃ ಇದನ್ನು ಒಪ್ಪಿಕೊಂಡಿದ್ದಾನೆ. ಎಡರಂಗ ಇಲ್ಲದೇ ಹೋಗಿದ್ದರೆ ಸ್ಥಾಪಿತ ಹಿತಾಸಕ್ತಿಗಳ ಕೈಗೊಂಬೆಯಾಗಿರುವ ಕಾಂಗ್ರೆಸ್[ಐ]ನ ಆಧಿಪತ್ಯದಲ್ಲಿ ಬುಡಕಟ್ಟು ಜನ ಬದುಕಿ ಉಳಿಯುತ್ತಿದ್ದರೋ ಇಲ್ಲವೋ ಹೇಳುವುದು ಅಸಾಧ್ಯ.

ಗಣಶಕ್ತಿ

ತ್ರಿಪುರಾದ ಕಮ್ಯುನಿಸ್ಟ್ ಚಳುವಳಿಯೊಳಗೆ ಗುಂಪುಗಾರಿಕೆ ಮತ್ತು ಅಂತಃಕಲಹವಿದೆಯೆಂದು ಕೆಲವು ರಾಷ್ಟ್ರೀಯ ಪತ್ರಿಕೆಗಳು ಆಪಾದಿಸಿವೆ. ಇದು ನಿಜವೇ?

ನೃಪೇನ್

ಕೇವಲ ಸಂದರ್ಭಸಾಧಕತನವನ್ನೇ ರೂಢಿಸಿಕೊಂಡಿರುವ ಪತ್ರಿಕಾರಂಗದಲ್ಲಿ ಇಂತಹ ಕಟ್ಟುಕತೆಗಳು ಹೊಸದೇನಲ್ಲ. ಎಲ್ಲ ಬಂಡವಾಳಶಾಹೀ ಪಕ್ಷಗಳೂ ನಿರಂತರ ಗುಂಪುಗಾರಿಕೆ ಮತ್ತು ಒಳಜಗಳಗಳಿಂದ ಒಡೆದುಹೋಗುತ್ತಿರುವಾಗ ಕಮ್ಯುನಿಸ್ಟರ ಕುರಿತು ಇಂತಹ ಕತೆಕಟ್ಟಿ ಹೇಳುವುದರಲ್ಲೂ ಒಂದು ರಾಜಕೀಯ ದುರುದ್ದೇಶ ಇದೆ. ಲೆನಿನ್ ಅವರ ಕಾಲದಿಂದಲೂ ಬಂಡವಾಳಶಾಹೀ ಪತ್ರಿಕೆಗಳು ಮಾಡುತ್ತಾ ಇದ್ದದ್ದು ಇದನ್ನೇ. ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷದಲ್ಲೂ ತೀವ್ರವಾದ ಅಂತರಿಕ ಸಂಘರ್ಷವಿರುವುದು ನಿಜ; ಮತ್ತು ಇದು ಕಮ್ಯುನಿಸ್ಟ್ ಚಳುವಳಿಯ ಮೂಲಭೂತ ಅಗತ್ಯಗಳಲ್ಲಿ ಒಂದು. ಇದನ್ನು ಒಳಜಗಳ ಅಥವಾ ಗುಂಪುಗಾರಿಕೆಯೆಂದು ಬಂಡವಾಳಶಾಹೀ ಪತ್ರಿಕೆಗಳು ಹೇಳಬಯಸುತ್ತವೆ. ನಮ್ಮ ಪಕ್ಷದ ಪ್ರಜಾಸತ್ತಾತ್ಮಕ ಕೇಂದ್ರವಾದಕ್ಕೆ ಹಾನಿಯುಂಟುಮಾಡುವುದು ಅವುಗಳ ಉದ್ದೇಶ. ಜಾಗತಿಕ ಕಮ್ಯುನಿಸ್ಟ್ ಚಳುವಳಿ ಅನೇಕ ಅಭಿಪ್ರಾಯ ಭೇದಗಳಿರುವಾಗಲೂ ದಿನೇ ದಿನೇ ಪ್ರಬಲವಾಗುತ್ತಿದೆ ಮತ್ತು ಹೆಚ್ಚು ಒಗ್ಗಟ್ಟಾಗುತ್ತಿದೆಯೆನ್ನುವುದನ್ನು ಮರೆಯದಿರೋಣ. ನಾವೂ ನಿರಂತರ ಬೆಳೆಯುತ್ತಿರುವ ಈ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಭಾಗವಾಗಿದ್ದೇವೆ ಈ ಬಗ್ಗೆ ನಮಗೆ ಅಭಿಮಾನ ಇದೆ. ○

ನಿಕರಾಗುವಗೆ ಹೊಸ ಸಂವಿಧಾನ

ಯಾವುದೇ ಸಂವಿಧಾನ ಜನತೆಯ ವಾಣಿ ಎಂಬುದನ್ನು ನಿಕರಾಗುವ ಮತ್ತೊಮ್ಮೆ ಸಾಬೀತು ಪಡಿಸಿದೆ.

ವಿವಿಧ ಪಕ್ಷಗಳು, ಸಾಮೂಹಿಕ ಸಂಘಟನೆಗಳು ಭಾಗವಹಿಸಿದ್ದ ಇದುವರೆಗೂ ಒಂದೊಂದು ಭಾಗದಲ್ಲಿಯೂ ನಡೆದಿರುವ 73 ಚರ್ಚೆಗಳ ಫಲವಾಗಿ ನಿಕರಾಗುವಾದ ಅಧ್ಯಕ್ಷ ಡೇನಿಯಲ್ ಒರ್ಟೇಗ್ ಜನವರಿ 9-1987ರಂದು ಹೊಸ ಸಂವಿಧಾನವನ್ನು ಅಂಗೀಕರಿಸಿದ್ದಾರೆ.

ದುಡಿಯುವ ವರ್ಗದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿರುವ ಈ ಸಂವಿಧಾನದ ಕರಡನ್ನು ರಾಷ್ಟ್ರೀಯ ಸಭೆಯಲ್ಲಿ ಚರ್ಚಿಸಲಾಯಿತು ಚುನಾವಣೆ, ನಾಗರಿಕರ ಹಕ್ಕು ಅಧಿಕಾರ ವ್ಯಾಪ್ತಿ, ಅಟ್ಲಾಂಟಿಕ್ ಕೋಸ್ಟ್‌ಗೆ ಸಾಂಸ್ಕೃತಿಕ ಮಹತ್ವ ಹೊಸ ಸಂವಿಧಾನದ ಮುಖ್ಯ ಬೇರುಗಳು ○

ಇರಾನ್ ಎಡ ಶಕ್ತಿಗಳು ಒಗ್ಗೂಡಲಿ

ಇರಾನಿಯನ್ ಪೀಪಲ್ಸ್ ಫೆಡಾಯಿ (ಪೆ ಜಾಬ)ಯ 16ನೇ ವಾರ್ಷಿಕೋತ್ಸವ ಸಭೆ ಇತ್ತೀಚೆಗೆ ನವದೆಹಲಿಯಲ್ಲಿ ನಡೆಯಿತು.

ವಿವಿಧ ಪಕ್ಷಗಳ ಗಣ್ಯರು ಆಗಮಿಸಿದ್ದ ಈ ಸಭೆಯಲ್ಲಿ ಸಿ.ಪಿ.ಎಂ. ಪರವಾಗಿ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಸುರ್ಜಿತ್‌ರವರು ಭಾಗವಹಿಸಿ ಷಾ ವಿರುದ್ಧದ ಹೋರಾಟದಲ್ಲಿ ಈ ಸಂಘಟನೆ ವಹಿಸಿರುವ ಪಾತ್ರವನ್ನು ಗುರುತಿಸುತ್ತಾ ಖೊಮೇನಿ ಆಳ್ವಿಕೆಯನ್ನು ಕಿತ್ತೆಸೆಯಲು ಇರಾನ್‌ನ ಎಡಪಕ್ಷಗಳು ಒಗ್ಗೂಡಲಿ ಎಂದು ಆಶಿಸಿದರು.

ಮಿನರ್ವ ಮಿಲ್ ಹತ್ತಿಗಿರಣಿ ಕಾರ್ಮಿಕರ ಜಂಟಿ ಹೋರಾಟ

ದಿನಾಂಕ. 4-3-87 ರಂದು 15 ದಿವಸದಿಂದ ಹೋರಾಟ ನಡೆಸುತ್ತಿರುವ ಮಿನರ್ವ ಮಿಲ್ ಕಾರ್ಮಿಕರ ಜಂಟಿ ಹೋರಾಟ ಸಮಿತಿಯ ಪರವಾಗಿ ಶ್ರೀ ಆರ್. ವೆಂಕಟರಾಮಯ್ಯ, ಎಂ.ಎಲ್.ಎ. ಟಿ ಎಸ್. ಮಣಿ, ಎಂ.ಎಲ್.ಎ ಅವರ ಸಮ್ಮುಖದಲ್ಲಿ ಮುಖ್ಯಮಂತ್ರಿ, ಶ್ರೀ ರಾಮಕೃಷ್ಣ ಹೆಗ್ಗಡೆ ಮತ್ತು ಕಾರ್ಮಿಕ ಮಂತ್ರಿ, ಶ್ರೀ ಬೊಮ್ಮಾಯಿ ಅವರುಗಳಿಗೆ ಮನವಿ ಪತ್ರವನ್ನು ನೀಡಲಾಯಿತು. ಮುಖ್ಯ ಮಂತ್ರಿಯವರು, ಹಾಗೂ ಕಾರ್ಮಿಕ ಸಚಿವರು, ಜಂಟಿ ಸಭೆ ಕೂಡಲೇ ಕರೆಯುವುದಾಗಿ ಭರವಸೆ ನೀಡಿದರು. ಮಿನರ್ವ ಮಿಲ್ ಹತ್ತಿಗಿರಣಿಯಲ್ಲಿ 15 ಜನ ವಜಾ ಮಾಡಿರುವುದು ಮತ್ತು ಆಧುನೀಕರಣ ಮಾಡಿ 1200 ಜನ ಕಾರ್ಮಿಕರನ್ನು ಹೊರಹಾಕಲು ಸಂಚು ಮಾಡುತ್ತಿರುವುದು ಈ ಮನವಿ ಪತ್ರದಲ್ಲಿ ಮುಖ್ಯ ಬೇಡಿಕೆಯಾಗಿದೆ.

ಮೂರು ಸಂಘಗಳ ಪ್ರತಿನಿಧಿಗಳಾದ ಎಂ. ಎಂ. ಎಲ್. ಎ. ಯಿಂದ ಟಿ. ಚನ್ನಪ್ಪ ನಂಜಪ್ಪ, ಎ. ಎಸ್. ಟಿ ಯು. ಸಿ. ಯಿಂದ, ರಾಮಚಂದ್ರ ೨. ಮಣಿ, ಹಾಗೂ ಸಿ. ಐ. ಟಿ. ಯು. ಗನಿಂದ ಪಿ. ಕೆ. ಸುಬ್ರಮಣ್ಯಂ, ಅಂಜನಪ್ಪ, ಚಂದ್ರಶೇಖರ್ ಭಾಗವಹಿಸಿದ್ದರು.

ಹೊಸ ಕರಭಾರ ಜೀವನ ದುರ್ಭರ

[1ನೇ ಪುಟದಿಂದ]

ನೆವದಿಂದ ವ್ಯಾಪಾರಸ್ಥರು ಬೆಲೆ ಹೆಚ್ಚಿಸಲು ಅವಕಾಶ ಮಾಡಿಕೊಡುತ್ತಿದೆ. ಕೇಂದ್ರ ಸರ್ಕಾರದ ನೀತಿಯಿಂದಾಗಿರುವ ಹಣ ದುಬ್ಬರ, ಬೆಲೆ ಏರಿಕೆಗಳು ರಾಜ್ಯ ಸರ್ಕಾರಗಳ ಆರ್ಥಿಕ ಪರಿಸ್ಥಿತಿಯ ಮೇಲೂ ಕೆಟ್ಟ ಪರಿಣಾಮ ಬೀರುತ್ತಿದೆ. ದೇಶದ ಸಂಪನ್ಮೂಲಗಳನ್ನೆಲ್ಲ ಕೇಂದ್ರ ಸರ್ಕಾರ ತಾನೇ ಉಪಯೋಗಿಸುತ್ತಿದೆ. ರಾಜ್ಯಗಳಿಗೆ ನ್ಯಾಯಯುತವಾಗಿ ಸಲ್ಲಬೇಕಾಗಿರುವ ಪಾಲನ್ನು ನಿರಾಕರಿಸುತ್ತಲೇ ಬಂದಿದೆ. ಆ ಕಾರಣದಿಂದಲೇ ಕೇಂದ್ರದಿಂದ ರಾಜ್ಯಗಳಿಗೆ ಹೆಚ್ಚಿನ ಧನ ಸಹಾಯ ಲಭ್ಯವಾಗಬೇಕೆಂದೇ ಪ ಬಂಗಾಲದ ಮುಖ್ಯಮಂತ್ರಿ ಜ್ಯೋತಿಬಸು ಅವರ ವಾದವನ್ನು ಹೆಗಡೆಯವರೂ ಒಪ್ಪಿಕೊಂಡಿದ್ದರು ಜ್ಯೋತಿ ಬಸು ಅವರು ಕೇಂದ್ರದ ವಿರುದ್ಧ ತಮ್ಮ ಹೋರಾಟ ಮುಂದುವರಿಸುತ್ತಲೇ ಇದ್ದಾರೆ. ಆದರೆ ರಾಮಕೃಷ್ಣ ಹೆಗಡೆಯವರ ನಿಲುವಿನಲ್ಲಿ ಬದಲಾವಣೆ ಕಂಡು ಬಂದಿದೆ. ಕೇಂದ್ರದಿಂದ ರಾಜ್ಯಕ್ಕೆ ನ್ಯಾಯಯುತ ಪಾಲು ಸಿಕ್ಕುವಂತೆ ಹೋರಾಟ ಮುಂದುವರಿಯಬೇಕು, ಜಾವರ ಡ್ರಾಫ್ಟ್ ಸೌಲಭ್ಯ ತೆರಲೇ ಬೇಕು. ಅಭಿವೃದ್ಧಿ, ಬರ, ನೆರೆಹಾವಳಿ ಪರಿಹಾರಗಳಿಗೆ ಕೇಂದ್ರ ಸರ್ಕಾರ ತನ್ನ ನೌಕರರ ಕೆಲಸಗಾರರಿಗೆ ವೇತನ- ತುಟ್ಟಿಭತ್ತೆ ಹೆಚ್ಚಿಸುವ ಮುಂದೆ ರಾಜ್ಯ ಸರ್ಕಾರಗಳ ಜೊತೆಯಲ್ಲಿ ವಿಚಾರ ವಿನಿಮಯ ಮಾಡಲೇ ಬೇಕು. ಇವೆಲ್ಲವುಗಳ ಪರಿಣಾಮ ರಾಜ್ಯ ಸರ್ಕಾರಗಳ ಆರ್ಥಿಕ ರಂಗದ ಮೇಲೆ ಬೀಳುತ್ತದೆ.

ಅವುಗಳೆಲ್ಲಾ ಒಂದಂಶವಾದರೆ ಮಾರಾಟ ತೆರಿಗೆ, ಅಬ್ಕಾರಿ ಸುಂಕಗಳ ವಸೂಲಿ ಸಮರ್ಪಕವಾಗಬೇಕು, ಯೋಜನೇತರ ಬಾಬುಗಳಿಗಾಗಿರುವ ಖರ್ಚು ಕಡಿಮೆಯಾಗಬೇಕು. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಆಡಳಿತೆ ಸುಧಾರಿಸ್ಪಡಬೇಕು, ದುಂದು ವೆಚ್ಚಗಳಿಗೆ ತಡೆ ಹಾಕಬೇಕು.

ಕಾಂಗ್ರೆಸ್ಸಿನ ಹಾಗೆಯೇ ಜನತಾ ಸರ್ಕಾರ ಸಿರಿವಂತರನ್ನು, ದೊಡ್ಡ ಉದ್ಯೋಗ ಪತಿಗಳನ್ನು ಗ್ರಾಮಾಂತರ ಪ್ರದೇಶದ ಭೂಮಾಲಿಕರನ್ನೆಲ್ಲಾ ಮುಟ್ಟದೆ, ಅವರ ಸಂಪತ್ತನ್ನು ರಕ್ಷಿಸಿ, ಬಡ ಮಧ್ಯಮ ವರ್ಗದ ಮೇಲೆ ಹೊರ ಬೀಳುವಂಥ ರೀತಿಯಲ್ಲಿ ತೆರಿಗೆ ವಿಧಿಸುವುದು ಸರಿಯಲ್ಲ. ಜನರೆಲ್ಲ ಮತ್ತಷ್ಟು ದುರ್ಭರ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆ.

(1ನೇ ಪುಟದಿಂದ)

"ನನ್ನ ಮಗಳನ್ನು ರವಿ ಮತ್ತು ಅವನ ಗೆಳೆಯರು ಸಬ್ ರಿಜಿಸ್ಟ್ರಾರ್ ಆಫೀಸಿಗೆ ಕರೆದುಕೊಂಡು ಹೋಗುವುದನ್ನು ಹಲವು ಜನ ನೋಡಿದ್ದಾರೆ. ಆ ದಿನ ಆಕೆಯನ್ನು ಕರೆದುಕೊಂಡು ಹೋಗುವಾಗ ಸಂಜೆಯ ಒಳಗೆ ಮನೆಗೆ ವಾಪಸ್ ಕರೆದು ತಂದು ಬಿಡುವುದಾಗಿ ರವಿ ಮತ್ತಿತರರು ಭರವಸೆ ನೀಡಿದ್ದರು. ಪೋಲೀಸರಿಗೆ ಎರಡು ಸಲ ದೂರಿತ್ತರೂ ಏನೂ ಪ್ರಯೋಜನವಾಗಿಲ್ಲೆಂದು ತಾರಾಳ ತಂದೆಯ ದೂರು".

ಯಾರು ತಪ್ಪಿತಸ್ಥರೆಂಬುದು ಬಹಿರಂಗವಾಗಿಯೇ ಕಂಡುಬರುತ್ತಿದ್ದರೂ ಕೂಡ ಪೋಲೀಸರು ಯಾವುದೇ ಕ್ರಮ ಕೈಗೊಳ್ಳದಿರುವುದು ಖಂಡನೀಯ. ಪದ್ಮಲತಾಳ ಹಾಗೆಯೇ ಲೋಕಯ್ಯ ಪೂಜಾರಿಯ ಕೊಲೆಯ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕೆಂದು ಸಿ. ಪಿ. ಐ. [ಎಂ] ರೈತ ಸಂಘ ಹಾಗೆಯೇ ಹಲವಾರು ಬೀಡಿ ಕಾರ್ಮಿಕರ ಸಂಘಗಳು ಒತ್ತಾಯಪಡಿಸುತ್ತಿವೆ. ಕೆಲವು ಶಾಸಕರೂ ಸಿ. ಓ. ಡಿ. ತನಿಖೆಯಾಗಬೇಕೆಂದು ಒತ್ತಾಯಿಸುತ್ತಿದ್ದಾರೆ.

ಈ ರೀತಿ ಸಾರ್ವಜನಿಕರೆಲ್ಲ ಒತ್ತಾಯ ತರುತ್ತಿದ್ದರೂ ಕೂಡ ರಾಜ್ಯ ಸರ್ಕಾರ ಅದರ ಗಾಂಭೀರ್ಯತೆಯನ್ನು ತಿಳಿದುಕೊಳ್ಳುತ್ತಿಲ್ಲ. ತನ್ನ ವರ್ಗ ಗುಣವನ್ನು ಪ್ರದರ್ಶಿಸುತ್ತಿದೆ. ಪಾವಗಡದಲ್ಲಿ ಪೋಲೀಸ್ ಸ್ಟೇಶನಿನಲ್ಲಿ ನಿರಪರಾಧಿಗಳ ಮೇಲೆ ಅಮಾನುಷ ದಬ್ಬಾಳಿಕೆ ನಡೆಸಿದ್ದಷ್ಟೇ ಅಲ್ಲ, ಜನರ ಮೇಲೆ ಗುಂಡುಹಾರಿಸಿ ಜನರನ್ನು ಕೊಂದು ಹಲವಾರು ಜನರನ್ನು ಜಖಂಗೊಳಿಸಿದ ಪೋಲೀಸ್ ಖಾತೆ, ಮಂಗಳೂರಿನಲ್ಲಿ ನಡೆದಿರುವ ಕೊಲೆ ಪ್ರಕರಣಗಳ ತಪಾಸಣೆ ಮಾಡುವುದರಲ್ಲಿ ಹಿಂದೇಟು ಹಾಕುತ್ತಿರುವುದು ಖಂಡನೀಯ ಹಾಗೂ ನಾಚಿಕೆಗೇಡಿತನದ್ದಾಗಿದೆ. ಗೃಹಮಂತ್ರಿ ರಾಚಯ್ಯನವರು ಈ ಪ್ರಕರಣಗಳ ಕುರಿತು ಯೋಗ್ಯ ವಿಚಾರಣೆ ನಡೆಸುವ ಕ್ರಮ ವಹಿಸುವುದು ಅತ್ಯಗತ್ಯ. ಕೊಲೆಪಾತಕಿಗಳಿಗೆ ಶಿಕ್ಷೆಯಾಗಲಿ! ಪೋಲೀಸರ ನಿಷ್ಕ್ರಿಯತೆ ನಿಲ್ಲಲಿ.

ವಿದ್ಯಾರ್ಥಿನಿಯ ಸಾವು ತನಿಖೆಗೆ ಅಗ್ರಹ

ಉಜಿರೆ ಎಸ್. ಡಿ ಎಂ. ಕಾಲೇಜಿನ ದ್ವಿತೀಯ ಪಿ. ಯು. ಸಿ. ವಿದ್ಯಾರ್ಥಿನಿ ಪದ್ಮಲತ ಕಳೆದ 2 ತಿಂಗಳಿನಿಂದ ನಾಪತ್ತೆಯಾಗಿದ್ದು, ಈ ಬಗ್ಗೆ ಫೆ. 5 ರಂದು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ತನಿಖೆಯನ್ನು ತೀವ್ರಗೊಳಿಸಬೇಕೆಂದು ಒತ್ತಾಯಿಸಿದ ಬಳಿಕ ತನಿಖೆ ಪ್ರಾರಂಭವಾದ ಮೇಲೆ ಇತ್ತೀಚೆಗೆ ಈ ಪ್ರಕರಣದ ಹಿನ್ನೆಲೆಯಲ್ಲಿ ಪ್ರಭಾವೀ ವ್ಯಕ್ತಿಗಳ ಕೈವಾಡ ಇರಬಹುದು ಎಂದು ಎಸ್. ಎಫ್. ಐ. ಈ ಹಿಂದೆ ಶಂಕೆ ವ್ಯಕ್ತಪಡಿಸಿತ್ತು. ಆ ಬಳಿಕ ನಿನ್ನೆ ಸದ್ರಿ ವಿದ್ಯಾರ್ಥಿನಿ ಶವ ಧರ್ಮಸ್ಥಳದ ನನೆಯಲ್ಲಿ ಕೈ ಕಾಲು ಕಟ್ಟಿ ದೊರಕಿದೆ ಎಂಬ ವಿಚಾರದಲ್ಲಿ ಈ ಮರಣದ ಹಿನ್ನೆಲೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ, ಈ ಪ್ರಕರಣದ ಹಿನ್ನೆಲೆಯಲ್ಲಿರುವ ಯಾವುದೇ ವ್ಯಕ್ತಿಯಾಗಿದ್ದಲ್ಲಿ ಆತನನ್ನು ಬಂಧಿಸಿ, ಆತನ ಮೇಲೆ ಕಠಿಣ ರೀತಿಯ ಕ್ರಮ ಕೈಗೊಳ್ಳಬೇಕೆಂದು ಎಸ್. ಎಫ್. ಐ. ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಒತ್ತಾಯಿಸಿದೆ. ಸ್ಥಳೀಯ ಪೋಲೀಸರು ಈ ಪ್ರಕರಣದ ಬಗ್ಗೆ ನಿಷ್ಕ್ರಿಯವಾಗಿ ಯಾವುದೇ ಆಸಕ್ತಿಯನ್ನು ತೋರದ ಕಾರಣ ಸ್ಥಳೀಯ ನಿಷ್ಕ್ರಿಯ ಬೇಜವಾಬ್ದಾರಿ ಅಧಿಕಾರಿಗಳನ್ನು ಅಮಾನತು ಮಾಡಿ ಉನ್ನತ ಮಟ್ಟದ ತನಿಖೆಯನ್ನು ನಡೆಸಬೇಕೆಂದು ಎಸ್. ಎಫ್. ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಒತ್ತಾಯಿಸಿದೆ

ಈ ವಾರ....

★ ಅಮೆರಿಕಾ ಭಾರತಕ್ಕೆ ಕೊಡಲೊಪ್ಪಿರುವ ಕ್ರೇ ಕಂಪೆನಿಯ ಅತ್ಯಾಧುನಿಕ ಸುಪರ್ ಕಂಪ್ಯೂಟರ್ ಭಾರತ ಕೇಳಿದ್ದಕ್ಕಿಂತ ಕಳಪೆ ಮಟ್ಟದ್ದು. ಭಾರತದ ಮಾರುಕಟ್ಟೆಯನ್ನು ಅಮೇರಿಕನ್ ವ್ಯಾಪಾರಸ್ಥರಿಗೆ ತೆರೆಯುವ ಪ್ರಯತ್ನವಾಗಿ ಇದನ್ನು ಮಾರಲಾಗುತ್ತಿದೆಯಂತೆ. ಕ್ರೇ ಕಂಪೆನಿಯ ಅಧಿಕಾರಿಗಳು ಭಾರತದಲ್ಲಿ ಕಂಪ್ಯೂಟರ್‌ನ ಜೊತೆಗೇ ಇದ್ದು ಭಾರತ ಅದನ್ನು ತನ್ನ ಅಣುಕಾರ್ಯಕ್ರಮ ಇತ್ಯಾದಿಗೆ ಬಳಸದಂತೆ ನೋಡಿಕೊಳ್ಳುವರು.

ಪಿ.ಟಿ.ಐ. ಸುದ್ಧಿ, ಮಾರ್ಚ್ 4

★ ಅಮೆರಿಕಾ ಶಸ್ತ್ರಾಸ್ತ್ರ ಪೈಪೋಟಿಯನ್ನು ಮುಂದುವರಿಸಿದೆ ಯೆಂಬ ಅಪಾದನೆಗೆ ಒಳಗಾಗಲು ಸ್ವತಃ ತಾನೇ ಕಾರಣ. ಫೆಬ್ರುವರಿ ತಿಂಗಳಲ್ಲಿ ಅದು ನಡೆಸಿದ ಎರಡು ಅಣುಸ್ಫೋಟ ಅಮೆರಿಕಾದ್ಯಂತ ತೀವ್ರ ಟೀಕೆಗೊಳಗಾಯಿತು. ಅಮೇರಿಕನ್ ಆಡಳಿತದ ಕಟ್ಟಾ ಮಿತ್ರದೇಶಗಳು ಕೂಡಾ ಹೆಚ್ಚುಚ್ಚು ಟೀಕೆ ಮಾಡಲಾರಂಭಿಸಿದ್ದಾರೆ.

ಇಂಡಿಯನ್ ಎಕ್ಸ್ ಪ್ರೆಸ್, ಮಾರ್ಚ್.3

★ ಕರ್ನಾಟಕದ ಕೆಲವು ಅತ್ಯಂತ ನೀಚ ಚಿತ್ರಹಿಂಸೆ ತುಮಕೂರು ಜಿಲ್ಲೆಯಲ್ಲಿ ನಡೆದಿದೆ. ಪಾವಗಢ ಇದರಲ್ಲಿ ತೀರಾ ಇತ್ತೀಚಿನದಷ್ಟೆ. ಇವುಗಳ ಹಿಂದೆ ಇರುವವರು ಪೋಲೀಸ್ ಇಲಾಖೆಯಿಂದ ಶಿಸ್ತು ಕ್ರಮಕೊಳಪಟ್ಟರೂ ಜನತಾದ ಪ್ರಮುಖ ವ್ಯಕ್ತಿಗಳಿಂದಾಗಿ ತಮ್ಮ ಸ್ಥಾನಗಳನ್ನು ವಾಪಸು ಪಡೆದ ವ್ಯಕ್ತಿಗಳು ಎಂದು ಉಚ್ಛ ಪೋಲೀಸ್ ವಲಯಗಳೇ ಹೇಳುತ್ತಿವೆ.

ಇ.ಎನ್.ಎಸ್. ಸುದ್ಧಿ, ಮಾರ್ಚ್. 3

★ ರಾಜೀವಗಾಂಧಿ ಹೆಜ್ಜೆಂದರೆ ನಿಸ್ಸಾರ ಎನ್ನಬಹುದಾದ ಬಜೆಟ್ಟನ್ನು ಮಂಡಿಸಿದ್ದಾರೆ. ಹಲವಾರು ವಿಧಗಳಲ್ಲಿ ಇದು ನಿರೀಕ್ಷಿತವೇ. ಮೂರು ರಾಜ್ಯಗಳ ವಿಧಾನ ಸಭೆಗಳ ಚುನಾವಣೆಗಳು ಸಮೀಪಿಸುತ್ತಿವೆ.

ಟೈಂಸ್ ಆಫ್ ಇಂಡಿಯಾ, ಮಾ. 1

★ 250 ಕೋಟಿ ರೂ.ಗಳ ಬಾಂಡುಗಳನ್ನು ಹೊರಡಿಸುವ ಮೂಲಕ "ಖಾಸಗೀಕರಣ" ದತ್ತ ರೈಲ್ವೇ ಇಲಾಖೆಯ ಪಯತ್ನಗಳು ವೆಚ್ಚಕಾರೀ ಏಕೆಂದರೆ ತೆರಿಗೆ ಮುಕ್ತ 10% ಬಡ್ಡಿ ದರದ ಈ ಬಾಂಡುಗಳು ಶ್ರೀಮಂತರಿಗೆ ಮತ್ತು ಕಂಪೆನಿ ವಲಯಕ್ಕೆ ಅಸಾಧಾರಣ ಆಕರ್ಷಣೆ ಹೊಂದಿದೆ ಮಾತ್ರವಲ್ಲ ಸರ್ಕಾರ ಈ ರೀತಿ ವಿನಿಯೋಗಿಸಿರುವ ಹಣದ ಮೇಲೆ ಶೇಖರಿಸಬಹುದಾಗಿದ್ದ ತೆರಿಗೆ ತಪ್ಪಿದಂತಾಗುತ್ತದೆ.

ಡೆಕ್ಕನ್ ಹೆರಾಲ್ಡ್, ಫೆ.28

★ ರಾಜ್ಯಕ್ಕೆ ಹಣ ಕಾಸಿನ ನ್ಯಾಯಯುತ ಪಾಲು (ಕೇಂದ್ರದಿಂದ) ಸಿಕ್ಕುವಂತೆ ಸರ್ಕಾರ ಒತ್ತಾಯ ಹೇರುವ ಜಾಡನ್ನು ಇನ್ನಾದರೂ ತಳಿಯುಬೇಕಾದುದು ರಾಜ್ಯದ ಆರ್ಥಿಕ ಚೈತನ್ಯ ಹಾಗೂ ಬೆಳವಣಿಗೆ ದೃಷ್ಟಿಯಿಂದ ಅದರ ಕರ್ತವ್ಯ.

ಪ್ರಜಾವಾಣಿ, ಫೆ.28

ತುಟ್ಟಿಭತ್ತೆ ಇಳಿಸುವ ಕುತಂತ್ರ

1960ರ ಆಧಾರಿತವಾದ ಗ್ರಾಹಕರ ಬೆಲೆ ಸೂಚ್ಯಂಕವನ್ನು 1982ರ ಆಧಾರಿತ ಸೂಚ್ಯಂಕವನ್ನಾಗಿ ಪರಿವರ್ತಿಸಿ ತುಟ್ಟಿಭತ್ತೆಯನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ಪ್ರಯತ್ನ ನಡೆಸಿದೆ. ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ಪ್ರಾದೇಶಿಕ ಸಮಿತಿ ಸಭೆ ಮದರಾಸಿನಲ್ಲಿ 3-3-87 ರಂದು ಸೇರಿತ್ತು. ಸಿ.ಐ.ಟಿ ಯು. ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅವರು ಆ ಸಭೆಯಲ್ಲ ಭಾಗವಹಿಸಿ ಕೇಂದ್ರಸರ್ಕಾರದ ನೀತಿಯನ್ನು ಖಂಡಿಸಿದ್ದಾರೆ. ಅವರು ಸಲ್ಲಿಸಿದ ಮನವಿಯ ಪೂರ್ತಿ ಪಾಠವನ್ನು ಮುಂದಿನವಾರ ಪ್ರಕಟಿಸಲಾಗುವುದು. ಕೇಂದ್ರ ಸರ್ಕಾರದ ಈ ನೀತಿಯನ್ನು ಎಲ್ಲ ಕಾರ್ಮಿಕ ಸಂಘಗಳೂ ವಿರೋಧಿಸಬೇಕು. ○

ರೈತರಿಗೆ ಪರಿಹಾರವಿಲ್ಲ.

"ಈ ಮುಂಗಡ ಪತ್ರದಲ್ಲಿ ರೈತರಿಗೆ ಏನೂ ಪರಿಹಾರವಿಲ್ಲ. ಆಹಾರ ನಿಗಮಕ್ಕೆ ನೀಡಿರುವ ರೂ 1200 ಕೋಟಿ ಸಹಾಯಧನ [illegible] ಭ್ರಷ್ಟಚಾರಕ್ಕೆ ಎಡೆಕೊಡುವುದು"

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N.K. Upadhyaya